ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 19 ಮೇ 17, 1987 ಬೆಲೆ 1 ರೂ.

ಮುಂದಿನ ಸಂಚಿಕೆಗಳಲ್ಲಿ

ಮೇ 24

★ ವಿದ್ಯುಚ್ಛಕ್ತಿ ದರ ಏರಿಕೆ – ವಿದ್ಯುಚ್ಛಕ್ತಿ ಕೊರತೆ

ಮೇ 31

★ ಕ್ರಿಶ್ಚಿಯನ್ ಎಡ ವಿಚ್ಛಿದ್ರಕಾರಿಗಳು

★ ಸಿ. ಐ. ಟಿ. ಯು. 6ನೇ ಸಮ್ಮೇಳನ

ಮುದ್ರಣಾಲಯದ ತೊಂದರೆಯಿಂದಾಗಿ ಮೇ 10 ರ ಸಂಚಿಕೆ ಬರಲಿಲ್ಲ. ಈ ವಾರ ಕೂಡ 4 ಪುಟಗಳ ಸಂಚಿಕೆ ತರಲಾಗುತ್ತಿದೆ. ಇದಕ್ಕಾಗಿ ವಿಷಾದಿಸುತ್ತೇವೆ.

ಈ ಕೊರತೆಯನ್ನು ತುಂಬಲು ಮೇ 31 ರ ಸಂಚಿಕೆಯನ್ನು ವಿಶೇಷ ಸಂಚಿಕೆಯಾಗಿ ತರಲಾಗುತ್ತಿದೆ.

[ಕೊನೆ ಪುಟ ನೋಡಿ]

ಬದಲಾದ ಪರಿಸ್ಥಿತಿ ಎದುರಿಸಲು ಸಿ. ಐ. ಟಿ. ಯು. ಸನ್ನದ್ಧವಾಗಬೇಕು

ನಮ್ಮ ದೇಶದ ಮತ್ತು ವಿಶ್ವದ ಕಾರ್ಮಿಕ ಆಂದೋಲನದಲ್ಲಿ ತ್ವರಿತ ಬೆಳವಣಿಗೆಗಳು ನಡೆಯುತ್ತಿರುವ ಸಂದರ್ಭದಲ್ಲಿ ನಾವು ಸಮ್ಮೇಳನ ನಡೆಸುತ್ತಿದ್ದೇವೆ. ಕೇವಲ ರೂಢಿಯೊಂದನ್ನು ಪೂರೈಸಲಷ್ಟೇ ಚರ್ಚೆ ನಡೆಸುವ ರೀತಿಯನ್ನು ಕೊನೆಗೊಳಿಸಿ, ಬದಲಾಗುತ್ತಿರುವ ಸ್ಥಿತಿಯನ್ನು ಎದುರಿಸುವಲ್ಲಿ ಸಿ.ಐ.ಟಿ.ಯು. ಮತ್ತು ಕಾರ್ಮಿಕ ಆಂದೋಲನದ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ಚರ್ಚೆಯನ್ನು ಯೋಜಿಸಬೇಕಾಗಿದೆ.

ನಮ್ಮ ದೇಶದಲ್ಲಿ ಕಾರ್ಮಿಕ ವರ್ಗದ ಕಾರ್ಯಾಚರಣೆಗಳು ಭುಗಿಲೆದ್ದಿವೆ. ಐಕ್ಯತೆಯ ಭಾವನೆ ಹೆಚ್ಚೆಚ್ಚು ಅಭಿವ್ಯಕ್ತಗೊಳ್ಳುತ್ತಿದೆ. ಕಾರ್ಮಿಕ ಸಂಘಟನೆಗಳ ಐಕ್ಯತೆಗೆ ಇನ್ನೂ ವ್ಯಾಪಕವಾದ ಒಂದು ಆಧಾರದ ಅಗತ್ಯವಿದೆಯೆಂಬುದನ್ನು ಕೂಡಾ ಜನವರಿ 21ರ ಸಾರ್ವಜನಿಕ ವಲಯದ ಮುಷ್ಕರ ಮನಗಾಣಿಸಿದೆ. ಈಗ ರಾಷ್ಟ್ರೀಯ ಆಂದೋಳನ ಸಮಿತಿ ಕಾರ್ಮಿಕ ಸಂಘಗಳ ಐಕ್ಯತೆಯ ಪ್ರಮುಖ ಸಾಧನವಾಗಿದೆ. ಆದರೆ ಈ ಎಲ್ಲಾ ಕಾರ್ಯಾಚರಣೆಗಳನ್ನು ಸಂಘಟಿಸಿ, ನಡೆಸಿರುವುದು ರಾಷ್ಟ್ರೀಯ ಆಂದೋಳನ ಸಮಿತಿಯಲ್ಲಿ ಪರಿಣಾಮಕಾರೀ ಪಾತ್ರವಿಲ್ಲದ ಸಾಮೂಹಿಕ ಸಂಘಟನೆಗಳು. ರಾಷ್ಟ್ರೀಯ ಆಂದೋಲನ ಸಮಿತಿ ಮತ್ತು ಅದರ ಐಕ್ಯತೆ ಮುಖ್ಯವಾಗಿ ಐದು–ಆರು ಕೇಂದ್ರ ಕಾರ್ಮಿಕ ಸಂಘಟನೆಗಳ ಭಾಗವಹಿಸುವಿಕೆ ಅಥವಾ ಐಕ್ಯತೆಯ ಮೇಲೆ ನಿಂತಿದೆ. ಈ ಸಮಿತಿಯ ಬಹಳಷ್ಟು ಸದಸ್ಯ ಸಂಘಟನೆಗಳಿಗಿಂತ ದೊಡ್ಡದಾದ ಅಖಿಲ ಭಾರತ ಒಕ್ಕೂಟಗಳಿಗೆ ಆಹ್ವಾನಿತರ ಸ್ಥಾನ–ಮಾನವಷ್ಟೇ ಇದೆ. ಈಗ ಈ ದೊಡ್ಡ ಒಕ್ಕೂಟಗಳಿಗೂ ಸಭೆಗೆ ಕರೆಯುವಲ್ಲಿ ಮತ್ತು ಸರ್ವಸಾಮಾನ್ಯ ಧೋರಣೆ ಹಾಗೂ ಕಾರ್ಯಾಚರಣೆ ಯೋಜಿಸುವಲ್ಲಿ ಸಮಾನ ಅವಕಾಶ ದೊರೆಯುವಂತೆ ಆಂದೋಲನ ಸಮಿತಿಯ ನೆಲೆಯನ್ನು ವ್ಯಾಪಕಗೊಳಿಸಬೇಕು. ಈ ಬೇಡಿಕೆಯನ್ನು ಸಿ.ಐ.ಟಿ.ಯು. ಬಹಳ ಹಿಂದೆಯೇ ಮುಂದಿಟ್ಟಿದೆ. ನಮ್ಮ ಸಮ್ಮೇಳನದಲ್ಲಿ ಅದನ್ನು ಪುನರುಚ್ಚರಿಸಿ ಅದಕ್ಕಾಗಿ ಛಲದಿಂದ ಪ್ರಯತ್ನಿಸಬೇಕಾದ ಕಾಲ ಈಗ ಬಂದಿದೆ.

ಬಿ. ಟಿ. ರಣದಿವೆ

ಒಂದೆಡೆ ದುರ್ಬಲ ಪ್ರದೇಶಗಳಲ್ಲಿ ಸುಧಾರಣಾವಾದಿ ಮುಖಂಡರು ದೊಡ್ಡ-ದೊಡ್ಡ ಸಾಮೂಹಿಕ ಕಾರ್ಯಾಚರಣೆಗಳನ್ನು ನಡೆಸಲು ಶಕ್ತರಾಗಿದ್ದರೆ, ನಾವು ಏನೂ ಮಾಡಲಾರದಾಗಿದ್ದೇವೆ. ಇದೆಲ್ಲಕ್ಕೆ ಕಾರಣ ಕಾರ್ಮಿಕ ಸಂಘಗಳನ್ನು ನಡೆಸುವ ಹಳೆಯ ರೂಢಿಗಳಿಂದ ಹೊರಬರಲು ನಮಗಿನ್ನೂ ಸಾಧ್ಯವಾಗದಿರುವುದು. ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಯ ಅಭಾವದಿಂದಾಗಿ ಸಾಮಾನ್ಯ ಕಾರ್ಮಿಕರ ಪಾತ್ರವಿಲ್ಲದಿರುವುದು ಕಾರ್ಮಿಕ ಸಮೂಹದೊಂದಿಗೆ ಸದಾಕಾಲ ಸಂಪರ್ಕವಿಲ್ಲದಿರುವುದು, ಖಾಯಂ ಅಲ್ಲದ, ಕಾರ್ಮಿಕರ, ಮಹಿಳಾ ಕಾರ್ಮಿಕರ ದುಃಸ್ಥಿತಿಗಳನ್ನು ಗಮನಿಸದೆ ಖಾಯಂ ಕಾರ್ಮಿಕರ ಹಿತಾಸಕ್ತಿಗಳ ರಕ್ಷಣೆಗಷ್ಟೇ ತಮ್ಮನ್ನು ಸೀಮಿತಗೊಳಿಸಿಕೊಳ್ಳುವುದು, ಅಲ್ಪಸಂಖ್ಯಾತ ಮತ್ತು ದಲಿತ ಜಾತಿಗಳ ಕಾರ್ಮಿಕರ ವಿಶೇಷ ಸಮಸ್ಯೆಗಳನ್ನು ಪೂರ್ಣವಾಗಿ ಗಮನಿಸದೇನೇ ಇರುವುದು. ಇವೆಲ್ಲಾ ನಮ್ಮ ದೌರ್ಬಲ್ಯಗಳು, ನಿರುದ್ಯೋಗಿಗಳು ಕಾರ್ಮಿಕ ವರ್ಗದ ಭಾಗವಾಗಿದ್ದು ಅವರ ಹಿತಾಸಕ್ತಿಗಳ ರಕ್ಷಣೆ ಸಂಘಟಿತ ಕಾರ್ಮಿಕ ವರ್ಗದ ಕರ್ತವ್ಯ ಎಂಬ ಪ್ರಾಥಮಿಕ ಪ್ರಜ್ಞೆಯ ಅಭಾವ ಇವೆಲ್ಲಾ ನಮ್ಮ ದೌರ್ಬಲ್ಯಗಳು.

ಈ ಎಲ್ಲಾ ಸಮಸ್ಯೆಗಳು ನಮ್ಮ ಚರ್ಚೆಗಳ ಪ್ರಮುಖ ಗಮನ ಸೆಳೆಯದಿದ್ದರೆ ಸಿ.ಐ.ಟಿ.ಯು. ಅಧಿವೇಶನ ಫಲಪ್ರದವಾಗಲಾರದು. ಸಮ್ಮೇಳನದಲ್ಲಿ ವಿವಿಧ ರಾಜ್ಯಗಳ ಭಾಷಣಕಾರರು ಈ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಏನು ಮಾಡಲಾಗಿದೆ ಎಂಬ ವಸ್ತುಸ್ಥಿತಿಯನ್ನು ಮುಂದಿಡುವುದು ಅಗತ್ಯ. ದುಡಿಯುವ ಮಹಿಳೆ ಮತ್ತು ನಮ್ಮ ಕೆಲಸದ ಬಗ್ಗೆ ಒಂದು ಅಧಿವೇಶನವನ್ನೇ ಮೀಸಲಿಡಬೇಕೆಂಬುದು ನನ್ನ ಅಭಿಪ್ರಾಯ. ನಿರುದ್ಯೋಗ ಮತ್ತು ಅಲ್ಪಸಂಖ್ಯಾತರ ಸಮಸ್ಯೆಗಳತ್ತ ಒಂದು ಅಧಿವೇಶನದಲ್ಲಿ ವಿಶೇಷ ಗಮನ ನೀಡುವುದೂ ಅಗತ್ಯ.

ದ. ಆಫ್ರಿಕಾದ ವಿಮೋಚನಾ ಸಮರ

ದ. ಆಫ್ರಿಕಾದ ಬೋಥ ಸರ್ಕಾರ ಬ್ರಿಟಿಷ್–ಅಮೇರಿಕನ್ ಸಾಮ್ರಾಜ್ಯಶಾಹಿಯ ಬೆಂಬಲ ಪಡೆದು ಅನುಸರಿಸುತ್ತಿರುವ ವರ್ಣ ಭೇದ ನೀತಿಯ ವಿರುದ್ಧ ಅವಿರತವಾದ ಹೋರಾಟ ನಡೆಸುತ್ತಿರುವ ದ.ಆಫ್ರಿಕಾದ ಜನತೆಯ ಕಾರ್ಮಿಕ ಮುಖಂಡರಾದ ಕಾ. ಜೆಸ್ಟಿಸ್ ಹಲಾಲೆಯವರಿಗೆ ಸಿ.ಐ.ಟಿ.ಯು. ರಾಜ್ಯ ಸಮಿತಿಯಿಂದ ಬೆಂಗಳೂರಿನಲ್ಲಿ ಹಾರ್ದಿಕ ಸ್ವಾಗತ ನೀಡಲಾಯಿತು. ಮೇ 18ರಿಂದ 22ರವರೆವಿಗೆ ಬಾಂಬೆಯಲ್ಲಿ ಜರುಗಲಿರುವ ಸಿ.ಐ.ಟಿ.ಯು. 6ನೇ ಅಖಿಲ ಭಾರತ ಸಮ್ಮೇಳನಕ್ಕೆ ದ. ಆಫ್ರಿಕಾದಿಂದ ಸೌಹಾರ್ದ ಪ್ರತಿನಿಧಿಗಳಾಗಿ ಪಾಲ್ಗೊಳ್ಳಲು ಆಗಮಿಸಿರುವ ಮೂರು ಸದಸ್ಯರ ನಿಯೋಗದಲ್ಲಿ ಒಬ್ಬರಾದ ಕಾ. ಜೆಸ್ಟಿಸ್ ಹಲಾಲೆಯವರು ಚಿನ್ನದ ಗಣಿ ಕಾರ್ಮಿಕರ ನಾಯಕ. ತನ್ನ ದೇಶದ ಆಕ್ರೋಶ ಸಿಟ್ಟನ್ನು ತನ್ನ ಮಾತಿನ ಮೂಲಕ ಆಸ್ಫೋಟಿಸುತ್ತಿದ್ದ ಈ ಸಂಗಾತಿ ಭಾರತೀಯ ಜನತೆಗೆ ವಂದನೆಗಳನ್ನು ಸಲ್ಲಿಸಿ ತನ್ನ ಭಾಷಣ ಆರಂಭಿಸಿದರು.

ದ. ಆಫ್ರಿಕಾ–ಭಾರತೀಯರ ನಡುವೆ ಸ್ನೇಹ–ಸೌಹಾರ್ದತೆ ಬೆಳೆಯುವಂತಾಗಲು ಈ ಭೇಟಿ ಸಹಾಯಕವಾಗಲೆಂದು ಹಾರೈಸಿದರು ಭಾರತದ ಕೈಗಾರಿಕೆಗಳು ವಸತಿ, ಕಾರ್ಮಿಕ ಸಂಘಟನೆಗಳು ಈ ಬಗ್ಗೆ ಕುರಿತು ತಿಳಿಯುವ ಆಸಕ್ತಿಯಿಂದ ಕೆಲದಿನಗಳ ಭಾರತ ಪ್ರವಾಸ ಕೈಗೊಂಡು ಇದರ ಅಂಗವಾಗಿ ಬೆಂಗಳೂರು ಕೆ.ಜಿ.ಎಫ್. ಭೇಟಿಗಾಗಿ ಆಗಮಿಸಿರುವುದಾಗಿ ತಿಳಿಸಿದರು. ಸ್ವತ: ಗಣಿಕಾರ್ಮಿಕನಾಗಿ

ವರದಿ : ಎನ್. ರಾಜಣ್ಣ

ದುಡಿಮೆ ಆರಂಭಿಸಿದ ಹಲಾಲೆಯವರು 20 ವರ್ಷ ಗಣಿ ಕಾರ್ಮಿಕರ ಮಧ್ಯೆ ದುಡಿದಿದ್ದಾರೆ. ಕೆ.ಜಿ.ಎಫ್.ನ ಗಣಿ ಕಾರ್ಮಿಕರ ಸ್ಥಿತಿಗತಿಯನ್ನು ತಿಳಿಯಲು ತಾನು ಮೊದಲ ಆದ್ಯತೆ ನೀಡಿ ವೀಕ್ಷಿಸಲು ತೆರಳುವುದಾಗಿ ಹೇಳಿದರು.

ಭಾರತದ ಜನತೆ ದಿನ ನಿತ್ಯ ದ.ಆಫ್ರಿಕಾದ ನಮ್ಮ ಹೋರಾಟಗಳ ಕುರಿತು ದೂರದರ್ಶನ-ರೇಡಿಯೋ ಪತ್ರಿಕೆಗಳಲ್ಲಿ ಓದುತ್ತಿರುವಿರಿ.

ದ.ಆಫ್ರಿಕಾದ ಬೋಥಾನ ಫ್ಯಾಸಿಸ್ಟ್ ಆಡಳಿತದ ಜನತೆಯ ಎಲ್ಲಾ ರೀತಿಯ ನಾಗರೀಕ ಸ್ವಾತಂತ್ರ್ಯವನ್ನು ಕಸಿದುಕೊಂಡಿದೆ. ಸಾಮಾಜಿಕ ಭದ್ರತೆ ಮಾಯವಾಗಿದೆ. ಮೆರವಣಿಗೆ–ಬಹಿರಂಗ ಸಭೆ ನಡೆಸುವಂತಿಲ್ಲ. ಸಾಮಾನುಗಳನ್ನು ತುಂಬುವ ಪೆಟ್ಟಿಗೆಯಂತಹ ಗೂಡುಗಳಲ್ಲಿ ನಮ್ಮ ವಾಸ್ತವ ಜೀವನ ಸಾಗುತ್ತಿವೆ. ಒಟ್ಟು ಶಿಕ್ಷಣ ಎಂಬ ಕರಿಯರಿಗಾಗಿಯೇ ನೀಡಿರುವ ಪ್ರತ್ಯೇಕ ಶಿಕ್ಷಣದ ಹೆಸರಿನಲ್ಲಿ ಶಿಕ್ಷಣ ವಂಚನೆ ನಡೆದಿದೆ.

ಆಧುನಿಕ ತಂತ್ರಜ್ಞಾನದ ಹೆಸರಿನಲ್ಲಿ ಕಾರ್ಖಾನೆಗಳಿಂದ ರಿಟ್ರೆಂಚ್‌ಮೆಂಟ್ ಕಾರ್ಮಿಕರ ವಜಾ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. 16 ಸಾವಿರ ಕಾರ್ಮಿಕರನ್ನು ಒಂದೇ ಬಾರಿಗೆ ವಜಾಗೊಳಿಸಿದ್ದನ್ನು ಪ್ರತಿಭಟಿಸಿ ತೆಗೆದ ರ್‍ಯಾಲಿಯ ಮೇಲೆ ನಡೆದ ಗೋಲಿಬಾರ್‌ನಲ್ಲಿ 6 ಮಂದಿ ಕೊಲ್ಲಲ್ಪಟ್ಟರು. ಕಾರ್ಮಿಕ ಸಂಘಗಳ ಕಛೇರಿಗಳ ಮೇಲೆ ದಾಳಿ ಸರ್ವೆ ಸಾಮಾನ್ಯವಾಗಿವೆ. ಒಮ್ಮೆ ದಾಳಿಯಾದರೆ ಕಛೇರಿಯಲ್ಲಿರುವ ಎಲ್ಲಾ ದಾಖಲೆ ಪತ್ರ ನಾಶಗೊಳಿಸಿ, ನಾಯಕರನ್ನು ವಿಚಾರಣೆ ಇಲ್ಲದೆ ಬಂಧಿಸಿ ಜೈಲಿನಲ್ಲಿ ಕ್ರೂರವಾದ ಚಿತ್ರಹಿಂಸೆ ನೀಡಲಾಗುತ್ತಿದೆ. ಭಾರತ ಪ್ರವಾಸ ಕೈಗೊಳ್ಳುವಾಗ ಕೂಡ ತಾನು ವಕೀಲರ ರಕ್ಷಣೆಯಲ್ಲಿ ವಿಮಾನ ಹತ್ತಬೇಕಾಗಿ ಬಂದ ಸನ್ನಿವೇಶವನ್ನು ವಿವರಿಸಿದರು.

ಕಾ॥ ವಿ. ಪಿ. ಚಿಂತನ್ ನಿಧನ

ಸೋವಿಯತ್ ರಷ್ಯಾದಲ್ಲಿ ಮೇ ದಿನಾಚರಣೆ ಪೆರೇಡ್‌ನಲ್ಲಿ ಪಾಲ್ಗೊಳ್ಳಲು ತೆರಳಿದ ಭಾರತ ನಿಯೋಗದಲ್ಲಿದ್ದ ಸಿ.ಐ.ಟಿ.ಯು.ಕಾರ್ಯ ಸಮಿತಿ ಸದಸ್ಯರಾಗಿದ್ದ ಕಾ. ವಿ. ಪಿ. ಚಿಂತನ್‌ರವರು ಮೇ 8ರಂದು ಬೆಳಗ್ಗೆ ಉಪಹಾರ ಸ್ವೀಕರಿಸುವಾಗ ಹೃದಯಾಘಾತಕ್ಕೀಡಾಗಿ ನಿಧನಗೊಂಡರು.

ಮೇ 13 ರಂದು ಮದ್ರಾಸ್ ನಗರ ತಲುಪಿದ ಪಾರ್ಥೀವ ಶರೀರವನ್ನು ಪಕ್ಷದ ಜಿಲ್ಲಾ ಸಮಿತಿ ಕಛೇರಿಯಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕೆಂದು ಇಡಲಾಗಿತ್ತು. ಬೆಳಿಗ್ಗೆ 9-30 ರಿಂದಲೇ ಜನ ಬರಲಾರಂಭಿಸಿದರು ತಮಿಳುನಾಡು ಸರ್ವ ಪಕ್ಷಗಳ ಕರೆಯಂತೆ ಮದ್ರಾಸ್ ನಗರದ ಎಲ್ಲಾ ಕೈಗಾರಿಕಾ ಕೇಂದ್ರ-ವಾಣಿಜ್ಯ ವ್ಯಾಪಾರ ಸ್ತಬ್ಧಗೊಂಡು ಇಡೀ ನಗರದ ಸಮಸ್ತ ಜನತೆ ತನ್ನ ಸಂತಾಪ ಸೂಚಿಸಿ ಬಂದ್ ಆಚರಿಸಿತು.

ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದವರಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾ। ಇ. ಎಂ. ಎಸ್, ಕೇರಳ ರಾಜ್ಯ ಕಾರ್ಯದರ್ಶಿ ಕಾ। ಅಚ್ಚುತಾನಂದನ್, ಕರ್ನಾಟಕದಿಂದ ಕಾ। ಪಿ. ಕೆ. ಸುಬ್ರಮಣಿ, ಶಾಸಕರಾದ ಕಾ॥ ಟಿ. ಎಸ್. ಮಣಿ, ಸಿ. ಐ. ಟಿ. ಯು. ಕಾರ್ಯದರ್ಶಿ ಕಾ॥ ಗಂಗೂಲಿ, ತಮಿಳುನಾಡು ಮುಖ್ಯಮಂತ್ರಿ ಎಂ. ಜಿ. ರಾಮಚಂದ್ರನ್, ಹಾಗೂ ಅಣ್ಣಾ ಡಿ.ಎಂ.ಕೆ. ಪಕ್ಷದ ಪದಾಧಿಕಾರಿಗಳು ಹಾಜರಿದ್ದರು.

ಮಧ್ಯಾಹ್ನ 3-30 ಕ್ಕೆ ಹೊರಟ ಶವ ಯಾತ್ರೆಯ ಮುಂದೆ 69 ಮಂದಿ ಕೆಂಪು ಸಮವಸ್ತ್ರಧಾರಿಗಳು ಗೌರವ ಸೂಚಕವಾಗಿ ಅರ್ಧಕ್ಕಿಳಿಸಿದ ಧ್ವಜ ಹಿಡಿದು ಸಾಗಿದರು. ಬೀದಿಯ ಇಕ್ಕೆಲಗಳಲ್ಲಿ ನಿಂತು ನಗರದ ಜನತೆ ನಾಯಕನಿಗೆ ಸಂತಾಪ ಸೂಚಿಸಿತು. ಪ್ರಮುಖ ಬೀದಿಗಳಲ್ಲಿ ಹಾಯ್ದು ಹೆಟೀರಿ ಸ್ಮಶಾನ ತಲುಪಿ ಸಂತಾಪ ಸಭೆ ಏರ್ಪಡಿಸಲಾಯಿತು.

ರಷ್ಯ ಪ್ರವಾಸದ ನಿಯೋಗದಲ್ಲಿದ್ದ ಸಿ. ಪಿ. ಐ. ಮುಖಂಡ ಎಂ. ಎಸ್. ಕೃಷ್ಣನ್ ತಮಿಳುನಾಡು ಮುಖ್ಯಮಂತ್ರಿ ಎಂ. ಜಿ. ಆರ್ ರವರು ಮಾತನಾಡಿ ಕಾ॥ ಚಿಂತನ್‌ರವರು ತ್ಯಾಗಜೀವಿಯಾಗಿದ್ದು ಅವರು ಜನತೆಯ ಸಮಸ್ಯೆಗಳನ್ನು ಮಾನವೀಯ ದೃಷ್ಟಿಯಲ್ಲಿ ಕಾಣುತ್ತಿದ್ದರು ಎಂದರು.

ನಾನು ತಯಾರು ಮಾಡಿದ ಒಬ್ಬ ಸಂಗಾತಿಯ ಸಂತಾಪ ಸಭೆಯಲ್ಲಿ ನಾನು ಮಾತನಾಡಲು ಬದಗಿ(?) ಹೊರಡುತ್ತಿಲ್ಲವೆಂಬ ಅತೀವ ದುಃಖದಿಂದ ಮಾತನಾಡಿದವರು ಕಾ। ಪಿ. ರಾಮಮೂರ್ತಿಯವರು.

ಕೇಂದ್ರದಲ್ಲಿ ಹೆಚ್ಚುತ್ತಿರುವ ಅಸ್ಥಿರತೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಕೇಂದ್ರ ಸಮಿತಿಯು ಏಪ್ರಿಲ್ 9 ರಿಂದ 12 ರವರೆಗೆ ದೆಹಲಿಯಲ್ಲಿ ಸಭೆಸೇರಿ ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ವಿದ್ಯಮಾನಗಳ ಕುರಿತು ಚರ್ಚಿಸಿದೆ. ಅಂತರಾಷ್ಟ್ರೀಯ ರಂಗದಲ್ಲಿ ಅಮೇರಿಕಾ ಮತ್ತು ರಶಿಯಾ ಇವೆರಡೂ ಯುರೋಪ್‌ನಿಂದ ಮಧ್ಯಮ ವ್ಯಾಪ್ತಿಯ ಕ್ಷಿಪಣಿಗಳನ್ನು ಕಿತ್ತುಹಾಕಬೇಕೆಂದು ಸೋವಿಯತ್ ಒಕ್ಕೂಟ ನೀಡಿದ ಪ್ರಸ್ತಾಪವನ್ನು ಕೇಂದ್ರ ಸಮಿತಿ ಸ್ವಾಗತಿಸಿದೆಯಲ್ಲದೆ ಭಾರತೀಯ ಜನಸಮುದಾಯವೂ ಸೋವಿಯತ್ ಒಕ್ಕೂಟದ ಈ ಪ್ರಸ್ತಾಪಗಳಿಗೆ ಬೆಂಬಲ ನೀಡಿ ವಿಶ್ವಶಾಂತಿಗಾಗಿ ಹಾಗೂ ಸಾಮ್ರಾಜ್ಯಶಾಹಿಗಳು ಸಿದ್ಧತೆ ನಡೆಸುತ್ತಿರುವ ಅಣುಯುದ್ಧದ ಅಪಾಯದ ವಿರುದ್ಧ ಹೋರಾಡಬೇಕೆಂದು ಕರೆ ನೀಡಿದೆ.

ಕೇರಳ-ಬಂಗಾಳಗಳ ವಿಜಯ-ಬದಲೀ ನೀತಿಗೆ ದೊರೆತ ಗೆಲುವು

ಕೇರಳ ಮತ್ತು ಪಶ್ಚಿಮ ಬಂಗಾಳಗಳ ವಿಧಾನ ಸಭೆಗಳಿಗೆ ನಡೆದ ಚುನಾವಣೆಯಲ್ಲಿ ಅಮೋಘ ವಿಜಯವನ್ನು ತಂದಿತ್ತುದಕ್ಕೆ ಕೇಂದ್ರ ಸಮಿತಿಯು ಈ ರಾಜ್ಯಗಳ ಪಾರ್ಟಿ ಸದಸ್ಯರು, ಪಾರ್ಟಿ ಕಮಿಟಿಗಳು ಮತ್ತು ಮಿತ್ರ ಪಕ್ಷಗಳನ್ನು ಹಾರ್ದಿಕವಾಗಿ ಅಭಿನಂದಿಸಿದೆ. ಕೇರಳ ಮತ್ತು ಬಂಗಾಳಗಳಲ್ಲಿ ದೊರೆತ ಗೆಲುವು ಕೇವಲ ಚುನಾವಣೆಯ ವಿಜಯ ಮಾತ್ರವಲ್ಲ. ಈ ಎರಡೂ ರಾಜ್ಯಗಳಲ್ಲಿ ಕಾಂಗ್ರೆಸ್ (ಐ) ನ ಸೋಲೆಂದರೆ ಅಲ್ಲಿ ನಾವು ಅನುಸರಿಸಿದ ಬದಲೀ ವರ್ಗ ಧೋರಣೆಗಳಿಗೆ ದೊರೆತ ಗೆಲುವು, ಜನಸಾಮಾನ್ಯರ ಹಿತರಕ್ಷಣೆಗಾಗಿ, ಕೋಮುವಾದದ ವಿರುದ್ಧ ಮತ್ತು ವಿಭಾಜಕ ಶಕ್ತಿಗಳ ವಿರುದ್ಧ ನಾವು ನಡೆಸಿದ ಅವಿರತ ಹೋರಾಟದ ಫಲವೇ ಈ ವಿಜಯ. ಈ ಎರಡೂ ರಾಜ್ಯಗಳಲ್ಲಿ ನಮ್ಮ ಪಕ್ಷವು ನಡೆಸಿಕೊಂಡು ಬಂದ ನಿರಂತರ ಸಾಮುದಾಯಿಕ ಚಟುವಟಿಕೆಗಳಿಂದಾಗಿ ನಮಗೆ ಜನಸಾಮಾನ್ಯರ ಜೊತೆಗೆ ನಿಕಟ ಸಂಪರ್ಕ ಬೆಳೆಸಿಕೊಳ್ಳಲು ಸಾಧ್ಯವಾಗಿದೆ. ನಮ್ಮ ಗೆಲುವಿಗೆ ಇದೇ ಕಾರಣ ಈ ದೃಷ್ಟಿಯಲ್ಲಿ ನಮ್ಮ ಗೆಲುವೆಂದರೆ ಕೇರಳ ಮತ್ತು ಪಶ್ಚಿಮ ಬಂಗಾಳಗಳಲ್ಲಿ ನಾವು ನಡೆಸಿದ ಸಾಮುದಾಯಿಕ ಚಟುವಟಿಕೆಗಳ ಮೌಲ್ಯಮಾಪನವೆಂದರೂ ತಪ್ಪಾಗಲಾರದು.

ಜಾತ್ಯಾತೀತ ವಿರೋಧ ಪಕ್ಷಗಳ ಹೊಂದಾಣಿಕೆ

ಕೇರಳ ಮತ್ತು ಪ. ಬಂಗಾಳಗಳಲ್ಲಿ ಸಿ. ಪಿ. ಐ. (ಎಂ) ಹಾಗೂ ಅದರ ಮಿತ್ರ ಪಕ್ಷಗಳು ಸಾಧಿಸಿದ ಗೆಲುವು ದೇಶಾದ್ಯಂತ ಪ್ರಗತಿಪರ ಶಕ್ತಿಗಳಿಗೆ ನವೋತ್ಸಾಹ ತುಂಬಿದೆ. ವಿಶಾಲ ತಳಹದಿಯ ಸಾಮುದಾಯಿಕ ಐಕ್ಯತೆಯ ಮೂಲಕ ಒಂದೆಡೆ ಕೋಮುವಾದಿ, ವಿಭಜನವಾದಿ ಶಕ್ತಿಗಳನ್ನೂ ಇನ್ನೊಂದೆಡೆ ಕಾಂಗ್ರೆಸ್ (ಐ) ಪಕ್ಷದ ಜನವಿರೋಧಿ ನೀತಿಯನ್ನೂ ಎದುರಿಸಿ ಹೋರಾಡಿ ಹಿಮ್ಮೆಟ್ಟಿಸಲು ಸಾಧ್ಯವೆಂಬ ಹೊಸ ಆಸೆ ಇದೀಗ ಚಿಗುರುತ್ತಿದೆ. ಕಾಂಗ್ರೆಸ್ (ಐ) ಪಕ್ಷಕ್ಕೆ ಪರ್ಯಾಯವಾಗಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಬದಲೀ ಶಕ್ತಿಯೊಂದು ಬೆಳೆದು ಬರಲು ಸಾಧ್ಯವೆನ್ನುವುದೂ ಈ ಗೆಲುವಿನಿಂದ ವ್ಯಕ್ತವಾಗುತ್ತಿದೆ. ಇಂದಿನ ನಿರ್ಣಾಯಕ ಪರಿಸ್ಥಿತಿಯಲ್ಲಿ ಆದಷ್ಟೂ ಹೆಚ್ಚಿನ ವಿಶಾಲ ತಳಹದಿಯ ಪ್ರಜಾಪ್ರಭುತ್ವವಾದಿ ಮತ್ತು ದೇಶಪ್ರೇಮಿ ಶಕ್ತಿಗಳು ಒಂದುಗೂಡಬೇಕೆಂದೂ ಆ ಮೂಲಕ ಕಾಂಗ್ರೆಸ್ (ಐ) ಪಕ್ಷವನ್ನು ಜನತೆಯಿಂದ ಇನ್ನಷ್ಟು ದೂರೀಕರಿಸಬೇಕೆಂದೂ ಹೆಚ್ಚಿನ ಜನ ಹಂಬಲಿಸುತ್ತಿದ್ದಾರೆ. ಕೇಂದ್ರ ಸಮಿತಿ ಈ ಆಶಯವನ್ನು ಮೆಚ್ಚಿಕೊಳ್ಳುವುದರ ಜೊತೆಗೆ ಎಲ್ಲ ಜಾತ್ಯಾತೀತ ವಿರೋಧ ಪಕ್ಷಗಳ ಚಟುವಟಿಕೆಗಳನ್ನು ಸಮನ್ವಯ ಗೊಳಿಸಲು ನಮ್ಮ ಪಕ್ಷ ಮುತುವರ್ಜಿ ವಹಿಸಬೇಕೆಂದೂ ನಿರ್ಧರಿಸಿದೆ. ಕೇರಳ ಮತ್ತು ಪ. ಬಂಗಾಳದ ಗೆಲುವಿನಿಂದಲೇ ಕಾಂಗ್ರೆಸ್ (ಐ) ಗೆ ಬದಲೀಯಾದ ಶಕ್ತಿಯೊಂದು ತನ್ನಿಂತಾನೆ ಬೆಳೆದುಬರುವುದೆಂದು ಕೇಂದ್ರ ಸಮಿತಿ ಭಾವಿಸುವುದಿಲ್ಲ. ತೀವ್ರ ರೀತಿಯ ಸಾಮುದಾಯಿಕ ಹೋರಾಟಗಳಿಂದಲೇ ಅದು ಬೆಳೆದು ಬರಬೇಕು. ರಾಜಕೀಯ ವಿದ್ಯಮಾನಗಳಲ್ಲಿ ಎಡಪಕ್ಷಗಳು ಮತ್ತು ಸಿ.ಪಿ.ಐ. [ಎಂ] ತಮ್ಮ ಪ್ರಭಾವವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಬೇಕು. ದೇಶದ ಐಕ್ಯತೆಗಾಗಿ ಮತ್ತು ಕೋಮುವಾದಿ ಹಾಗೂ ವಿಭಜನವಾದಿ ಶಕ್ತಿಗಳ ವಿರುದ್ಧ ತತ್ವನಿಷ್ಠ ಹೋರಾಟ ನಡೆಸದಿದ್ದರೆ ಕಾಂಗ್ರೆಸ್ (ಐ) ಯನ್ನು ಸೋಲಿಸುವುದು ಕಷ್ಟ ಎನ್ನುವ ಪಾಠವನ್ನು ಕೇರಳ ಮತ್ತು ಪ. ಬಂಗಾಳಗಳ ವಿಜಯದಿಂದ ಕಲಿಯಬೇಕು.

ಎಡ ಶಕ್ತಿಗಳ ಐಕ್ಯತೆ ದೃಢಗೊಳ್ಳಲಿ

ಹಿಂದೆಂದಿಗಿಂತಲೂ ಹೆಚ್ಚಾಗಿ ಈಗ ಜನಸಾಮಾನ್ಯರು ತಮ್ಮ ದೈನಂದಿನ ಹೋರಾಟಗಳಲ್ಲಿ ಮತ್ತು ಅತ್ಯಂತ ಪ್ರಮುಖವಾದ ರಾಜಕೀಯ ಪ್ರಶ್ನೆಗಳಲ್ಲಿ ಮಾರ್ಗದರ್ಶನಕ್ಕಾಗಿ ಎಡಪಕ್ಷಗಳ ಐಕ್ಯತೆಯನ್ನು ಬಲಗೊಳಿಸಬೇಕಾದುದು ಹಿಂದೆಂದಿಗಿಂತಲೂ ಈಗ ಅಗತ್ಯ, ಮತ್ತು ಇದು ಎಲ್ಲಾ ಎಡಪಕ್ಷಗಳ ಜವಾಬ್ದಾರಿ ಕೂಡಾ. ಈ ದಿಸೆಯಲ್ಲಿ ಯಾವುದೇ ಹಿನ್ನಡೆಯುಂಟಾದರೆ ಅದು ಅನಾಹುತಗಳಿಗೆ ಎಡೆ ಮಾಡಿಕೊಡಬಹುದು. ಆದುದರಿಂದಲೇ ಆಂಧ್ರ ಪ್ರದೇಶದ ಜಿಲ್ಲಾ ಮತ್ತು ಪಂಚಾಯತ್ ಚುನಾವಣೆಯಲ್ಲಿ ಸಿ. ಪಿ. ಐ. (ಎಂ) ಮತ್ತು ಸಿ.ಪಿ.ಐ. ಇವೆರಡೂ ತೆಲುಗುದೇಶಂ ಪಕ್ಷದ ಜೊತೆ ಸೇರಿ ಕಾಂಗ್ರೆಸ್ (ಐ) ಪಕ್ಷದ ವಿರುದ್ಧ ಜಂಟಿಯಾಗಿ ಹೋರಾಟ ನಡೆಸಲು ವಿಫಲವಾದುದರ ಕುರಿತು ನಮಗೆ ಬೇಸರವಾಗಿದೆ.

ರಾಜೀವ್‌ಗಾಂಧಿಯವರ ಸುಳ್ಳಿನ ಕಂತೆ

ಕೇರಳ ಮತ್ತು ಪ. ಬಂಗಾಳದ ಚುನಾವಣಾ ಪ್ರಚಾರದ ವೇಳೆ ಕಾಂಗ್ರೆಸ್ (ಐ) ಪಕ್ಷ ಚುನಾವಣಾ ನೀತಿಸಂಹಿತೆಯನ್ನು ಸಂಪೂರ್ಣವಾಗಿ ಗಾಳಿಗೆ ತೂರಿಬಿಟ್ಟಿದೆ. ಪ್ರಧಾನಿ ರಾಜೀವ ಗಾಂಧಿಯಂತೂ ಚುನಾವಣಾ ಪ್ರಚಾರವನ್ನು ರಸ್ತೆ-ಜಗಳದ ಮಟ್ಟಕ್ಕೆ ಇಳಿಸಿಬಿಟ್ಟಿದ್ದರು. ಇದಕ್ಕೆ ಕಾರಣವಿಷ್ಟೆ. ರಾಜೀವ್ ಗಾಂಧಿಗೆ ದೇಶದಲ್ಲಿರುವ ಗಂಭೀರವಾದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ತನ್ನನ್ನು ಸಮರ್ಥಿಸಿಕೊಳ್ಳಲು ಯಾವ ಸರಕೂ ಇರಲಿಲ್ಲ. ಪಂಜಾಬ್ ಸಮಸ್ಯೆ, ಗೂರ್ಖಾಲ್ಯಾಂಡ್, ರಾಮಜನ್ಮಭೂಮಿ ಬಾಬರಿ ಮಸೀದಿ ವಿವಾದ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಹಾಗೂ ಕೇರಳದಲ್ಲಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಕೋಮುವಾದಿಗಳ ಜೊತೆಗೆ ಕಾಂಗ್ರೆಸ್ (ಐ) ಬೆಳೆಸಿಕೊಂಡಿದ್ದ ನಂಟಿನ ಬಗ್ಗೆ ರಾಜೀವ ಗಾಂಧಿ ತನ್ನನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿತ್ತೆ ?

ಪ. ಬಂಗಾಳ – ಮತದಾರರ ಪ್ರಬುದ್ಧತೆ

ಕಾಂಗ್ರೆಸ್ (ಐ) ಸರಕಾರವು ಅನುಸರಿಸುತ್ತಿರುವ ಬಂಡವಾಳಶಾಹಿ ಪದ್ಧತಿಯ ಅಭಿವೃದ್ಧಿ ಮಾರ್ಗದಿಂದಾಗಿ

> **ಇತ್ತೀಚೆಗೆ ದೆಹಲಿಯಲ್ಲಿ ಸೇರಿದ ಕೇಂದ್ರ ಸಮಿತಿ ಸಭೆ ಅಂಗೀಕರಿಸಿದ ರಾಜಕೀಯ ನಿರ್ಣಯ.**

ದೇಶವು ತೀವ್ರ ಆರ್ಥಿಕ ಬಿಕ್ಕಟ್ಟಿನಲ್ಲಿದೆ ಹಾಗಾಗಿ ಪ. ಬಂಗಾಳದ ಆರ್ಥಿಕತೆ ಕೂಡಾ ಇಂತಹದೇ ಬಿಕ್ಕಟ್ಟಿನಲ್ಲಿದೆ. ಇಂತಹ ಪರಿಸ್ಥಿತಿಯಲ್ಲಿ ರಾಜಕೀಯ ಪ್ರಜ್ಞೆ ತುಸವೇ ಕಡಿಮೆಯಿರುವ ಬೇರೆ ಯಾವ ಮತದಾರರಾದರೂ ಎಡರಂಗದ ವಿರುದ್ಧ ಮತ ಚಲಾಯಿಸುತ್ತಿದ್ದರೇನೋ. ಆದರೆ ಪ. ಬಂಗಾಳದ ಜನ ಈ ರೀತಿ ಮಾಡಲಿಲ್ಲ. ಅವರು ತಮ್ಮ ರಾಜ್ಯವನ್ನೂ ಒಳಗೊಂಡಂತೆ ಇಡೀ ದೇಶವನ್ನು ಸಾರ್ವತ್ರಿಕವಾಗಿ ಬಾಧಿಸುತ್ತಿರುವ ಮುಗ್ಗಟ್ಟಿಗೆ ಕೇಂದ್ರ ಸರಕಾರವೇ ಹೊಣೆಯೆಂದರು, ಕಾಂಗ್ರೆಸ್ (ಐ) ವಿರುದ್ಧ ಎಡರಂಗಕ್ಕೆ ಮತ ನೀಡಿದರು. ಇದು ಪ. ಬಂಗಾಳದ ಮತದಾರರ ಪ್ರಬುದ್ಧತೆಗೆ ಸಾಕ್ಷಿ. ಅಷ್ಟೇ ಅಲ್ಲದೆ ಎಡರಂಗ ಸರಕಾರದ ಸಾಧನೆ ಮತ್ತು ಜನಸಾಮಾನ್ಯರ ಜೊತೆಗೆ ನಮ್ಮ ಸಂಬಂಧ ಅತ್ಯಂತ ನಿಕಟವಾಗಿರುವುದನ್ನು ಇದು ತೋರಿಸಿಕೊಟ್ಟಿದೆ. ಈ ದೃಷ್ಟಿಯಲ್ಲಿ ಪ. ಬಂಗಾಳದಲ್ಲಿ ನಮಗೆ ನಿಚ್ಚಳ ಬಹುಮತ ದೊರೆತಿರುವುದೊಂದು ಅಮೋಘ ಸಾಧನೆ.

ಕೇರಳ-ಕೋಮುವಾದಿಗಳಿಗೆ ಮುಖಭಂಗ

ಕೇರಳದಲ್ಲಿನ ಚುನಾವಣೆ ಗೆಲುವಿನ ಬಗ್ಗೆ ಹೇಳುವುದಾದರೆ ಅದು ಕಾಂಗ್ರೆಸ್ (ಐ) ಹಾಗೂ ಅದರ ಕೋಮುವಾದಿ ಮೂಲಭೂತವಾದಿ ಮಿತ್ರ ಕೂಟದ ವಿರುದ್ಧ ನಡೆದ ಖಾಡಾಖಾಡಿ ಹೋರಾಟ. ಈ ಶಕ್ತಿಗಳಿಗೆ ಬಹುಮತ ದೊರೆತ್ತಿಲ್ಲ; ಇದರರ್ಥ ಈ ಶಕ್ತಿಗಳ ಭದ್ರಕೋಟೆಯ ಮೇಲೆ ನಮ್ಮ ಆಕ್ರಮಣ ಪ್ರಾರಂಭವಾಗಿದೆ. ಇಡೀ ದೇಶದ ಎಲ್ಲ ಜನರ ಪಾಲಿಗೆ ಅದು ಅತ್ಯಂತ ಮುಖ್ಯವಾದ ವಿಚಾರ. ಆದರೆ ಇಷ್ಟರಿಂದಲೇ ತೃಪ್ತಿಹೊಂದುವ ಹಾಗಿಲ್ಲ. ಕೋಮುವಾದಿ ಮತ್ತು ಪ್ರತ್ಯೇಕವಾದಿ ಶಕ್ತಿಗಳ ಪ್ರಭಾವದೊಳಗೆ ಇನ್ನೂ ಉಳಿದಿರುವ ಜನರನ್ನು ನಾವು ರಾಷ್ಟ್ರೀಯ ವಾಹಿನಿಯೊಳಗೆ ಎಳೆದು ತರಬೇಕಾಗಿದೆ. ಅಲ್ಪಸಂಖ್ಯಾತ ಕೋಮುಗಳ ಅನೇಕ ಮುಂದಾಳುಗಳು ಧೈರ್ಯತೋರಿಸಿ ಕೋಮುವಾದಿ ಶಕ್ತಿಗಳಿಗೆ ಬೆಂಬಲ ನೀಡದಂತೆಯೂ ಎಡ ಪ್ರಜಾಸತ್ತಾತ್ಮಕ ರಂಗಕ್ಕೆ ಮತ ನೀಡುವಂತೆಯೂ ಜನರನ್ನು ವಿನಂತಿಸಿರುವುದು ಇನ್ನೊಂದು ಮಹತ್ವಪೂರ್ಣ ಅಂಶ. ಹಾಗಿದ್ದರೂ ಕೇರಳದಲ್ಲಾಗಲೀ ಪ. ಬಂಗಾಳದಲ್ಲಾಗಲೀ ಇಷ್ಟೊಂದು ಆರ್ಥಿಕ ಮುಗ್ಗಟ್ಟಿದ್ದರೂ, ಕಾಂಗ್ರೆಸ್ [ಐ] ಸಂದರ್ಭ ಸಾಧಕತನ ತೋರಿಸಿದ್ದರೂ ಅದು ಗಳಿಸಿದ ಮತಗಳ ಪ್ರಮಾಣ ಕಡಿಮೆಯಾಗಿಲ್ಲ. ಪ.ಬಂಗಾಳದಲ್ಲಿ ಅದಕ್ಕೆ ಈಗಲೂ ಶೇ. 41ರಷ್ಟು ಮತ ದೊರೆತಿದೆ. ಕಾಂಗ್ರೆಸ್ (ಐ) ನ ಹಿಂಬಾಲಕರಿಗೆ ಸರಿಯಾದ ಧೋರಣೆಗಳ ಬಗ್ಗೆ ತಿಳಿಹೇಳಿ ಅವರನ್ನು ಕಾಂಗ್ರೆಸ್ (ಐ) ಪ್ರಭಾವದಿಂದ ಬಿಡುಗಡೆಗೊಳಿಸಲು ನಾವು ಇನ್ನಷ್ಟು ಶ್ರಮವಹಿಸಬೇಕಾಗಿದೆ.

ಫೇರ್‌ಫಾಕ್ಸ್ ಹಗರಣ

ಫೇರ್‌ಫಾಕ್ಸ್ ಹಗರಣಕ್ಕೆ ಸಂಬಂಧಿಸಿದಂತೆ ರಾಜೀವ್‌ಗಾಂಧಿ ಸರಕಾರದ ವರ್ತನೆಯನ್ನು ಕೇಂದ್ರ ಸಮಿತಿ ತೀವ್ರವಾಗಿ ಖಂಡಿಸಿದೆ. ಯಾವುದೇ ನೆಪದಲ್ಲಾದರೂ ವಿದೇಶೀ ಗೂಢಚಾರ ಸಂಸ್ಥೆಗಳ ಸೇವೆಯನ್ನು ಬಳಸಿಕೊಳ್ಳುವುದು ದೇಶದ ಭದ್ರತೆಗೆ ಮಾರಕವಾಗಬಹುದು ಅಮೇರಿಕಾದ ಗೂಢಚಾರ ಸಂಸ್ಥೆಗಳ ಸೇವೆಯನ್ನು ಬಳಸಿಕೊಳ್ಳುವುದು ದೇಶದ ಭದ್ರತೆಗೆ ಮಾರಕವಾಗಬಹುದು ಅಮೇರಿಕಾದ ಗೂಢಚಾರ ಸಂಸ್ಥೆ ಸಿ. ಐ. ಎ. ವಿಶ್ವದ ಎಲ್ಲ ಕಡೆ ನಡೆಸುತ್ತಿರುವ ಗೂಢಚರ್ಯೆ ಮತ್ತು ಬುಡಮೇಲು ಕೃತ್ಯಗಳ ಸಂಪೂರ್ಣ ಅರಿವಿದ್ದೂ ಅಮೇರಿಕದ ಗೂಢಚಾರ ಸಂಸ್ಥೆಯನ್ನು ನಮ್ಮ ದೇಶಕ್ಕೆ ಆಮಂತ್ರಿಸಿದ್ದು ಮಹಾಪರಾಧ. ಫೇರ್‌ಫಾಕ್ಸ್ ಸಂಸ್ಥೆಯನ್ನು ನೇಮಕ ಮಾಡಿದ್ದು ತನಗೆ ಗೊತ್ತಿರಲಿಲ್ಲವೆಂದು ರಾಜೀವ ಗಾಂಧಿ ಹೇಳಿದ್ದು ಒಂದು ಕುಂಟು ನೆಪ ಅಷ್ಟೆ. ಹಾಗಿದ್ದರೂ ಇದು ಸರಕಾರದ ಹಾಗೂ ಅದರ ಮುಂದಾಳುವಿನ ಅಕ್ಷಮ್ಯ ಅದಕ್ಷತೆಯನ್ನಷ್ಟೇ ತೋರಿಸುತ್ತಿದೆ. ಬೇರೆ ದೇಶದಲ್ಲಿ ಇಂತಹ ಹಗರಣವೇನಾದರೂ ನಡೆದಿದ್ದರೆ ಇಡೀ ಸಚಿವ ಸಂಪುಟವೇ ರಾಜೀನಾಮೆ ಕೊಡಬೇಕಾಗುತಿತ್ತು. ಈ ಬಗ್ಗೆ ಸಂಸತ್ತಿನಲ್ಲಿ ಚರ್ಚೆಗೆ ಅವಕಾಶ ಮಾಡಿ ಕೊಡದಿರುವುದನ್ನು ಕೇಂದ್ರ ಸಮಿತಿ ಖಂಡಿಸಿದೆ. ಇಡೀ ಹಗರಣವನ್ನು ಮರಿಷ್ಠ ನ್ಯಾಯಾಲಯದ ನ್ಯಾಯಾಧೀಶರೊಬ್ಬರ ತನಿಖೆಗೆ ನೀಡಿರುವುದು ಸತ್ಯವನ್ನು ಶೋಧಿಸುವ ಉದ್ದೇಶದಿಂದಲ್ಲ; ಪಾರ್ಲಿಮೆಂಟಿನ ನ್ಯಾಯ ತೀರ್ಮಾನದಿಂದ ತಪ್ಪಿಸಿಕೊಳ್ಳುವುದೇ ಇದರ ಉದ್ದೇಶ. ಇದು ಸಂಸತ್ತಿನ ಸಾರ್ವಭೌಮತ್ವಕ್ಕೆ ಎಸೆದ ಸವಾಲು ಭಾರತದ ಸಂಪತ್ತನ್ನು ದೋಚಿ ಅದನ್ನು ಕಾನೂನುಬಾಹಿರವಾಗಿ ವಿದೇಶಕ್ಕೆ ರವಾನಿಸುತ್ತಿದ್ದ ಖದೀಮರನ್ನು ಸಂರಕ್ಷಿಸುವುದೇ ಈ ನ್ಯಾಯಾಂಗ ತನಿಖೆಯ ಹಿಂದಿರುವ ಉದ್ದೇಶ. ಫೇರ್‌ಫಾಕ್ಸ್ ಹಗರಣಕ್ಕೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನೂ ಭಾರತೀಯ ಜನತೆಯ ಮುಂದೆ ಬಹಿರಂಗ ಪಡಿಸಬೇಕೆಂದೂ ದೇಶದ ಹಣವನ್ನು ಕಳ್ಳತನದಿಂದ ಹೊರಗೆ ಸಾಗಿಸುತ್ತಿದ್ದ ಅಪರಾಧಿಗಳನ್ನು ಶಿಕ್ಷಿಸಬೇಕೆಂದೂ ಕೇಂದ್ರಸಮಿತಿ ಒತ್ತಾಯಿಸಿದೆ.

ಕೇಂದ್ರದಲ್ಲಿ ಅಸ್ಥಿರತೆ

ಫೇರ್‌ಫ್ಯಾಕ್ಸ್ ಹಗರಣ, ರಕ್ಷಣಾ ಸಚಿವಾಲಯದಲ್ಲಿ ನಡೆದ ಭ್ರಷ್ಟಾಚಾರ, ಮತ್ತು ವಿ. ಪಿ. ಸಿಂಗ್ ಅವರ ರಾಜೀನಾಮೆ ಇತ್ಯಾದಿಗಳೆಲ್ಲ ಇಂದಿನ ವ್ಯವಸ್ಥೆಯಲ್ಲಿನ ಬಿಕ್ಕಟ್ಟು ಮತ್ತು ಅದರಿಂದಾಗಿ ಕೇಂದ್ರದಲ್ಲಿ ತೀವ್ರ ಅಸ್ಥಿರತೆಯುಂಟಾಗಿರುವುದನ್ನು ತೋರಿಸಿಕೊಟ್ಟಿವೆ. ಕೇಂದ್ರ ಸಂಪುಟವೊಂದು ಏಕಪಾತ್ರಾಭಿನಯವಾಗುತ್ತಿದೆ. ಜನತೆ ವಹಿಸಿರುವ ಹೊಣೆಗಾರಿಕೆಯನ್ನಾಗಲೀ ಸಂಸತ್ತಿನ ಗೌರವವನ್ನಾಗಲೀ ಅಲಕ್ಷಿಸಲಾಗುತ್ತಿದೆ. ಮಂತ್ರಿಗಳೆಲ್ಲ ರಾಜೀವ ಗಾಂಧಿಯವರ ಗುಲಾಮರಂತೆ ವರ್ತಿಸುತ್ತಿದ್ದಾರೆ. ರಕ್ಷಣ ಸಚಿವಾಲಯದ ಹಗರಣವು ಅತ್ಯುನ್ನತ ಸ್ಥಾನದಲ್ಲಿ ಅದೆಷ್ಟು ಭ್ರಷ್ಟಾಚಾರ ತಾಂಡವವಾಡುತ್ತಿದೆ ಯೆನ್ನುವುದಕ್ಕೆ ಒಂದು ಕೆಟ್ಟ ನಿದರ್ಶನ.

ಸಂವಿಧಾನದ ನಿಯಮಗಳ ಉಲ್ಲಂಘನೆ

ಪ್ರಧಾನ ಮಂತ್ರಿ ಮತ್ತು ರಾಷ್ಟ್ರಾಧ್ಯಕ್ಷರ ನಡುವಿನ ಭಿನ್ನಾಭಿಪ್ರಾಯಗಳು ಮತ್ತು ಅದಕ್ಕೆ ಪತ್ರಿಕೆಯಲ್ಲಿ ದೊರೆತ ಬಹಿರಂಗ ಪ್ರಚಾರಗಳಿಂದ ಪ್ರಧಾನಿಯವರು ರಾಷ್ಟ್ರಾಧ್ಯಕ್ಷರಿಗೆ ವಿಷಯಗಳನ್ನು ತಿಳಿಸುವ ಕರ್ತವ್ಯದಲ್ಲಿ ವಿಫಲರಾಗಿದ್ದಾರೆನ್ನುವುದು ಸಾಬೀತಾಗಿದೆ. ಅಷ್ಟೇ ಅಲ್ಲ, ಅವರು ಸಂಸತ್ತಿಗೂ ತಪ್ಪು ಮಾಹಿತಿ ನೀಡಿದ್ದಾರೆ. ಇದು ಕೇವಲ ಇವರಿಬ್ಬರ ನಡುವಿನ ವೈಯುಕ್ತಿಕ ವಿವಾದ ಅಲ್ಲ, ಬದಲಾಗಿ ಸಂವಿಧಾನದ ನಿಯಮಗಳನ್ನು ತಮ್ಮ ಸ್ವಾರ್ಥಪರ ಉದ್ದೇಶಕ್ಕೆ ಬಳಸಿಕೊಳ್ಳುವ ಕಾಂಗ್ರೆಸ್ [ಐ]ನ ರಾಜಕೀಯ ಧೋರಣೆಯೇ ಇದಾಗಿರುತ್ತದೆ. ಜನವಿರೋಧಿ ನೀತಿಗಳನ್ನು ಅನುಸರಿಸುತ್ತಿರುವ ಕಾಂಗ್ರೆಸ್ (ಐ) ಮತ್ತು ಅದರ ಸಚಿವರಿಗೆ ಸಂವಿಧಾನದ ನಿಯಮಗಳನ್ನು ಗೌರವಿಸುವುದು ತುಂಬಾ ಕಷ್ಟವಾಗುತ್ತಿದೆ. ಪಕ್ಷದ ಹಿತಾಸಕ್ತಿಗೆ ತೊಂದರೆಯುಂಟಾಗುತ್ತದೆಂದರೆ ಕಾಂಗ್ರೆಸ್ (ಐ)ನವರಿಗೆ ಸಂವಿಧಾನವೂ ಬೇಡ, ಅದರ ನಿಯಮಗಳೂ ಬೇಡ. ಎಂದು ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

ಅಮೇರಿಕನ್ ಮಿಲಿಟರಿ ನೆಲೆಗಳಿಗೆ ಹೆಚ್ಚುತ್ತಿರುವ ವಿರೋಧ

ಸ್ಪೈಯಿನ್ ದೇಶದಲ್ಲಿ ಅಮೆರಿಕನ್ ಮಿಲಿಟರಿನೆಲೆಗಳ ಭವಿಷ್ಯದ ಬಗ್ಗೆ ಈ ದೇಶಗಳ ನಡುವೆ ನಡೆದ 5 ನೇ ಸುತ್ತಿನ ಮಾತುಕತೆ ಯಾವ ಫಲಿತಾಂಶವುಇಲ್ಲದೆ ಕೊನೆಗೊಂಡಿದೆ. ವಿಶೇಷವಾಗಿ ಟೊರ್ರೆಜೋನ್ ಎಂಬಲ್ಲಿ 72 ಎಫ್-16 ಬಾಂಬರ್ ವಿಮಾನಗಳ ನೆಲೆಯನ್ನು ಮುಚ್ಚಬೇಕೆಂದು ಸ್ಪೈಯಿನ್ ಸರ್ಕಾರ ಒತ್ತಾಯ ಮಾಡುತ್ತಿದೆ. 1956ರಲ್ಲಿ ಆಗಿನ ಸರ್ವಾಧಿಕಾರಿ ಜನರಲ್ ಫ್ರಾಂಕೋ ಅಮೆರಿಕಾಕ್ಕೆ ಸ್ಪೈಯಿನ್ ನೆಲದಲ್ಲಿ ಮಿಲಿಟರಿ ನೆಲೆಗಳಿಗೆ ಅವಕಾಶ ಮಾಡಿ ಕೊಟ್ಟಿದ್ದ. 1976 ರಲ್ಲಿ ಅಮೇರಿಕಾ ಮತ್ತು ಸ್ಪೈಯಿನ್ ಸಹಿ ಹಾಕಿದ ಮಿತ್ರತ್ವ ಮತ್ತು ಸಹಕಾರದ ಕೌಲು ಮೇ 1988 ರವರೆಗೆ ಮಾತ್ರ ಅಮೇರಿಕಾಕ್ಕೆ ಸ್ಪೈಯಿನ್ ನೆಲವನ್ನು ತನ್ನ ಮಿಟರಿ ಉದ್ದೇಶಗಳಿಗಾಗಿ ಬಳಸಲು ಅವಕಾಶ ನೀಡಿತು. ಸ್ಪೈಯಿನ್ ಸರಕಾರ ಇದನ್ನು ಮತ್ತೆ ಮುಂದುವರಿಸಲು ಸಿದ್ಧವಿಲ್ಲ ಆದರೆ ಅಮೇರಿಕಾ ಅದಕ್ಕಾಗಿ ಸರ್ವಪ್ರಯತ್ನ ನಡೆಸುತ್ತಿದೆ.

ಗ್ರೀಸ್‌ನ ಸೋಶಲಿಸ್ಟ್ ಸರ್ಕಾರ ಕೂಡ 1988 ರೊಳಗೆ ತನ್ನ ಮಣ್ಣಿನಲ್ಲಿ ಅಮೆರಿಕನ್ ಮಿಲಿಟರಿ ನೆಲೆಗಳನ್ನು ಮುಚ್ಚಲು ಒತ್ತಾಸುತ್ತಿದೆ. 1981 ರಲ್ಲಿ ಅಮೆರಿಕನ್ ನೆಲೆಗಳನ್ನು ಮುಚ್ಚುತ್ತೇವೆಂಬ ಮಾತು ಕೊಟ್ಟು ಸೋಶಲಿಸ್ಟ್ ಪಕ್ಷ ಅಧಿಕಾರಕ್ಕೆ ಬಂದಿತ್ತು. ಗ್ರೀಸ್‌ನ ಶಾಂತಿ ಚಳುವಳಿಯ ಬಲದಿಂದಾಗಿ ರೇಗನ್ ಸರ್ಕಾರ ಮಾತುಕತೆಗಳಲ್ಲೀನೋ ಭಾಗವಹಿಸುತ್ತಿದೆ. ಇನ್ನೊಂದೆಡೆ ಗ್ರೀಸ್‌ನ ವಾಯುಪ್ರದೇಶದ ಉಲ್ಲಘಂನೆಯಮೂಲಕ ಬೆದರಿಕೆಯನ್ನು ಹಾಕುತ್ತಿದೆ.

ಆಸ್ಟ್ರೇಲಿಯಾದಲ್ಲೂ ದೇಶದಪಶ್ಚಿಮದ ಪೈನ್‌ಗಾಪ್‌ನಲ್ಲಿ ಸೋವಿಯತ್‌ಒಕ್ಕೂಟದ ಮೇಲೆ ಸದಾ ಕಣ್ಣಿಟ್ಟ ಸಾಧನಗಳಿಂದ ಸುಸಜ್ಜಿತವಾದ ಜಗತ್ತಿನ ಅತೀ ದೊಡ್ಡ ರಾಡಾರ್ ನೆಲೆಯನ್ನು ಅಮೇರಿಕಾ ಸದ್ಯ ಹೊಂದಿದ್ದು ಅದನ್ನು ಮುಚ್ಚುವ ಬಗ್ಗೆ ಒಂದು ಕರಡುಶಾಸನವನ್ನು ಆಸ್ಟ್ರೇಲಿಯಾದ ಪಾರ್ಲಿಮೆಂಟಿಗೆ ಸಲ್ಲಿಸಲಾಗಿದೆ.

○

ಕೊರಿಯಾ, ಚೀಣಾದ ಸಿ. ಪಿ. ಐ. (ಎಂ) ನಿಯೋಗ

ಇಬ್ಬರು ಸದಸ್ಯರ ಒಂದು ಸಿ.ಪಿ.ಐ. (ಎಂ) ನಿಯೋಗ ಇತ್ತೀಚೆಗೆ ಉತ್ತರ ಕೊರಿಯಾದ ರಾಜಧಾನಿ ಪ್ಯೋಂಗ್ಯಾಂಗ್ ಮತ್ತು ಚೀಣಾದ ರಾಜಧಾನಿ ಬೈಜಿಂಗ್‌ಗೆ ಭೇಟಿ ನೀಡಿತು. ಪ್ರಧಾನ ಕಾರ್ಯದರ್ಶಿ ಕಾಂ॥ ಇ. ಎಂ. ಎಸ್. ನಂಬೂದಿರಿಪ್ಪಾದ್ ಹಾಗೂ ಕೇಂದ್ರ ಸಮಿತಿ ಸದಸ್ಯ ಕಾಂ॥ ಸೀತಾರಾಂ ಯೆಚೂರಿ ಈ ನಿಯೋಗದಲ್ಲಿದ್ದರು. ಏಪ್ರಿಲ್ 13 ರಿಂದ 17 ರವರೆಗೆ ಪ್ಯೋಗ್ಯಾಂಗ್‌ನಲ್ಲಿದ್ದ ಈ ನಿಯೋಗ ಮಹಾನ್ ಕೊರಿಯನ್ ಮುಂದಾಳು ಕಾಂ॥ ಕಿಮ್ ಇಲ್ ಸುಂಗ್‌ರ 75ನೇ ಜನ್ಮ ದಿನಾಚರಣೆಯಲ್ಲಿ ಭಾಗವಹಿಸಿ ಕೊರಿಯಾ ಕಾರ್ಮಿಕ ಪಕ್ಷದ ಕೇಂದ್ರ ಸಮಿತಿಯ ಪ್ರತಿನಿಧಿಗಳೊಂದಿಗೆ ಮಾತುಕತೆ ಮತ್ತು ಕಾಂ॥ ಕಿಮ್ ಇಲ್ ಸುಂಗ್ ಜತೆ ಸಂದರ್ಶನವೂ ಅಲ್ಲಿನ ಕಾರ್ಯಕ್ರಮದಲ್ಲಿ ಸೇರಿತ್ತು. ಅಲ್ಲದೆ ಕಳೆದ ನಾಲ್ಕು ದಶಕಗಳಿಂದ ಬೆಳೆದು ಬರುತ್ತಿರುವ ಸಿ. ಪಿ. ಐ.[ಎಂ] ಮತ್ತು ಕೊರಿಯಾ ಕಾರ್ಮಿಕ ಪಕ್ಷದ ನಡುವಿನ ಮಿತ್ರತ್ವಪೂರ್ಣ ಸಂಬಂಧಗಳಿಗೆ ಅಧಿಕೃತ ರೂಪ ನೀಡಿದ ಒಂದು ದಸ್ತಾವೇಜಿಗೆ ಏಪ್ರಿಲ್ 14 ರಂದು ಸಹಿ ಹಾಕಲಾಯಿತು.

ಪ್ಯೋಗ್ಯಾಂಗ್‌ನಿಂದ ಚೀಣಾ ಕಮ್ಯುನಿಸ್ಟ್ ಪಕ್ಷದ ಆಹ್ವಾನದ ಮೇರೆಗೆ ನಿಯೋಗದ ಸದಸ್ಯರು ಏಪ್ರಿಲ್ 17 ರಂದು ಬೈಜಿಂಗ್ ತಲುಪಿದಾಗ ಪಾಲಿಟ್‌ಬ್ಯೂರೋ ಸದಸ್ಯ ಕ್ವಿಯಾವೋಶಿ ಸ್ವಾಗತಿಸಿದರು. ಏಪ್ರಿಲ್ 20 ರವರೆಗೆ ಅಲ್ಲಿದ್ದ ಅವರು ಚೀಣಾ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಪ್ರತಿನಿಧಿಗಳೊಡನೆ ಮಾತುಕತೆ ನಡೆಸಿದರು. ಏಪ್ರಿಲ್ 18 ರಂದು ಕಾಂ॥ ಡೆಂಗ್ ಕ್ಸಿಯಾವೋಪಿಂಗ್‌ರನ್ನು ಭೇಟಿಯಾದರು.

ಈ ಎರಡು ಭೇಟಿಗಳು ಸಿ. ಪಿ. ಐ. [ಎಂ] ಮತ್ತು ಕೊರಿಯಾ ಕಾರ್ಮಿಕ ಪಕ್ಷ ಹಾಗೂ ಚೀಣಾ ಕಮ್ಯುನಿಸ್ಟ್ ಪಕ್ಷದ ನಡುವಿನ ಐಕ್ಯತೆಯನ್ನು ಮತ್ತಷ್ಟು ಬಲಪಡಿಸಿವೆ ಎಂದು ಕಾಂ॥ ಇ. ಎಂ. ಎಸ್. ತಿಳಿಸಿದ್ದಾರೆ.

●

ವಿಶ್ವಾದ್ಯಂತ ಮೇ ದಿನಾಚರಣೆ

ವಿಶ್ವಾದ್ಯಂತ 101ನೇ ಮೇ ದಿನವನ್ನು ಕಾರ್ಮಿಕರು ಆಚರಿಸಿದ್ದಾರೆ. ತಮ್ಮ ಪ್ರಭುತ್ವವಿರುವ ಸಮಾಜವಾದೀ ದೇಶಗಳಲ್ಲಿ ಹರ್ಷೋಲ್ಲಾಸಗಳಿಂದ ಅದನ್ನು ಆಚರಿಸಿದರೆ, ಇತರೆಡೆ ಐಕ್ಯ ಹೋರಾಟದ ಪ್ರತಿಜ್ಞೆಯೊಂದಿಗೆ, ಕೆಲವೆಡೆ ಆಳುವ ವರ್ಗದ ಲಾಠಿ – ಗುಂಡುಗಳನ್ನೂ ಎದುರಿಸಿ ಆಚರಿಸಿದರು.

ಮೊತ್ತಮೊದಲು ಕಾರ್ಮಿಕರ ಪ್ರಭುತ್ವ ಸ್ಥಾಪಿಸಿದ ಸೋವಿಯೆತ್ ಒಕ್ಕೂಟದಲ್ಲಿ ಜಾಗತಿಕ ಶಾಂತಿ ಮೇ ದಿನಾಚರಣೆಯ ಮುಖ್ಯ ವಿಷಯವಾಗಿತ್ತು. ಮಾಸ್ಕೋದ ಚಾರಿತ್ರಿಕ ಕೆಂಪು ಚೌಕದಲ್ಲಿ ನಡೆದ ಮೇದಿನ ಪರೇಡಿನಲ್ಲಿ ಪ್ರದರ್ಶಿಸಿದ ಸ್ಥಿರ ಚಿತ್ರಣಗಳಲ್ಲಿ ಒಂದು ನ್ಯೂಕ್ಲಿಯರ್ ಕ್ಷಿಪಣಿಗಳನ್ನು ಇತಿಹಾಸದ ಕಸದಬುಟ್ಟಿಗೆ ಎಸೆಯುವ ಬಗ್ಗೆ ಯೋಚಿಸುವ ಸಮಯ ಬಂದಿದೆ ಎಂದು ನಿರೂಪಿಸಿದರೆ, ಇನ್ನೊಂದರಲ್ಲಿ ಒಂದೆಡೆ ತಾರಾಯುದ್ಧದ ಅಂಕಲ್ ಸಾಮ್ ಒಂದು ದೈತ್ಯ ರಾಕೆಟ್‌ನಲ್ಲಿ ಕೂತಿದ್ದು, ಮತ್ತೊಂದೆಡೆ ಒಂದು ನಕ್ಷತ್ರದಿಂದ ತೂಗುತ್ತಿರುವ ಅಮೆರಿಕನ್ ಕೋಟ್ಯಾಧೀಶ ತನ್ನ ದೈತ್ಯ ಹಲ್ಲುಗಳ ನಡುವೆ ಭೂಗೋಳವನ್ನು ಕಚ್ಚಿಕೊಂಡಿದಂತೆ ಚಿತ್ರಿಸಲಾಗಿತ್ತು.

ಕಾರ್ಮಿಕರ ಅಂತರ್‍ರಾಷ್ಟ್ರೀಯ ಸೌಹಾರ್ದವನ್ನು ವರ್ಣರಂಜಿತವಾಗಿ ಪ್ರದರ್ಶಿಸಿದ ಈ ಸಮಾರಂಭದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಯ ಭಯೋತ್ಪಾದಕತೆಯನ್ನು ಎದುರಿಸುತ್ತಿರುವ ನಿಕಾರಗುವಾ, ಅಫಘಾನಿಸ್ತಾನ ಮುಂತಾದ ದೇಶಗಳ ಜನತೆಯ ಬಗ್ಗೆ ವಿಶೇಷ ಸೌಹಾರ್ದವನ್ನು ವ್ಯಕ್ತಪಡಿಸಲಾಯಿತು.

ದಕ್ಷಿಣ ಆಫ್ರಿಕಾದಲ್ಲಿ ಈಗಾಗಲೇ 11 ರೈಲ್ವೇ ಕಾರ್ಮಿಕರನ್ನು ಬಲಿ ತೆಗೆದುಕೊಂಡಿರುವ ಎರಡು ತಿಂಗಳಿಂದ ನಡೆಯುತ್ತಿರುವ ಕರಿಯ ರೈಲ್ವೇ ಕಾರ್ಮಿಕರ ಮುಷ್ಕರದ ಹಿನ್ನೆಲೆಯಲ್ಲಿ ಮೇ ದಿನಾಚರಣೆ ನಡೆಯಿತು. ಕರಿಯ ಕಾರ್ಮಿಕ ಸಂಘಗಳು ಕರೆ ನೀಡಿದ್ದ ಮೇ ದಿನ ಪ್ರದರ್ಶನವನ್ನು ಪ್ರತಿಬಂಧಿಸಿ ಬಿಳಿಯ ವರ್ಣದ್ವೇಷಿ ಸರ್ಕಾರ ಹೊರಡಿಸಿದ್ದ ಆಜ್ಞೆಗಳನ್ನು ಉಲ್ಲಂಘಿಸಿ 18 ಸ್ಥಳಗಳಲ್ಲಿ ಸಾರ್ವಜನಿಕ ಸಭೆ ನಡೆಸಲಾಯಿತು.

ಶ್ರೀಲಂಕಾದಲ್ಲೂ ಸರಕಾರದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಮೇ ದಿನಾಚರಣೆ ನಡೆಸಲಾಯಿತು.

ಫಿಲಿಪೈನ್ಸ್‌ನಲ್ಲಿ ಕೂಡಾ ಕಾರ್ಮಿಕರು ಮೇ ದಿನಾಚರಣೆ ನಡೆಸಿ ಅಕ್ವಿನೋ ಸರ್ಕಾರದ ಹಿಂದಿನ ಮಾರ್ಕೋಸ್ ಸರಕಾರಕ್ಕಿಂತ ತೀರಾ ಭಿನ್ನವಲ್ಲದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು.

⊙

ಕೇರಳದಲ್ಲಿ ಬರಗಾಲ 100 ಕೋಟಿ ನೆರವಿಗೆ ನಾಯನಾರ್ ಒತ್ತಾಯ

ಕೇರಳದ ಎಡ ಪ್ರಜಾಪ್ರಭುತ್ವ ರಂಗದ ಸರ್ಕಾರ ರಾಜ್ಯದಲ್ಲಿರುವ ತೀವ್ರವಾದ ಬರಗಾಲವನ್ನು ಎದುರಿಸಲು ಸಕಲ ಸಿದ್ಧತೆಗಳನ್ನು ಮಾಡುತ್ತಿದೆ. ಕೇಂದ್ರ ಸರ್ಕಾರದಿಂದ ಕನಿಷ್ಠ ಶೀಘ್ರವಾಗಿ 100 ಕೋಟಿ ರೂ ಸಹಾಯಧನ ನೀಡಬೇಕೆಂದು ಮುಖ್ಯ ಮಂತ್ರಿ ನಾಯನಾರ್ ಒತ್ತಾಯಿಸಿದ್ದಾರೆ.

ಈ ಬಗ್ಗೆ ಕೇರಳ ಸರ್ಕಾರ ಕೇಂದ್ರ ಸರ್ಕಾರಕ್ಕೆ ಒಂದು ಮನವಿ ಅರ್ಪಿಸಿ, ಈಗಾಗಲೇ ಒಂದು ತಿಂಗಳು ಆಗಿದ್ದರೂ, ಇತ್ತೀಚೆಗೆ ಮೇ 2ನೇ ತಾರೀಖು ರಾಜೀವ ಗಾಂಧಿಯವರು ಕೇವಲ 10 ಕೋಟಿ ರೂ ಘೋಷಿಸಿದ್ದಾರೆ. ಕೇಂದ್ರ ಇನ್ನೂ ಹೆಚ್ಚು ಸಹಾಯ ನೀಡಿದರಷ್ಟೇ, ಬರಗಾಲ ಕಾಮಗಾರಿಗಳನ್ನು ಆರಂಭಿಸಲು ಸಾಧ್ಯ ಎಂದು ಕ್ಯಾಲಿಕಟ್‌ನಲ್ಲಿ 'ಮೀಟ್ ದಿ ಪ್ರೆಸ್' ಕಾರ್ಯಕ್ರಮದಲ್ಲಿ ಕಾ॥ ಇ. ಕೆ. ನಾಯನಾರ್ ತಿಳಿಸಿದರು.

ಈಗಾಗಲೇ 560 ಟ್ಯಾಂಕುಗಳಲ್ಲಿ 2000 ಹಳ್ಳಿಗಳಿಗೆ ಕುಡಿಯುವ ನೀರಿನ ಸರಬರಾಜನ್ನು ಎಡ ಪ್ರಜಾಪ್ರಭುತ್ವ ಸರ್ಕಾರ ಆರಂಭಿಸಿದೆ. ಈ ನೀರು ಸರಬರಾಜಿನ ಉಸ್ತುವಾರಿಗಾಗಿ ಎಲ್ಲಾ ಪಕ್ಷಗಳ ಪ್ರತಿನಿಧಿಗಳು ಸೇರಿದ ಸಮಿತಿಗಳನ್ನು ಎಲ್ಲಾ ಮಟ್ಟದಲ್ಲೂ ರಚಿಸಲಾಗಿದೆ. ಇಷ್ಟಾದರೂ ನೀರಿನ ವಿತರಣೆಯಲ್ಲಿ ಪಕ್ಷಪಾತ ನಡೆಯುತ್ತಿದೆ ಎಂಬ ಕರುಣಾಕರನ್‌ರವರ ಆರೋಪ ಹುರುಳಿಲ್ಲದ್ದು. ತ್ರಿಶೂರ್ ಜಿಲ್ಲೆಯ ಸರ್ವಪಕ್ಷ ಸಮಿತಿಯಲ್ಲಿ ಹಿಂದೆ ಕೇರಳ ವಿಧಾನ ಸಭೆಯ ಅಧ್ಯಕ್ಷರಾಗಿದ್ದ ಕಾಂಗ್ರೆಸ್‌ನ ಇ. ಎಂ. ಸುಧೀರ್‌ರವರೇ ಸ್ವತಃ ಸದಸ್ಯರಾಗಿದ್ದಾರೆ, ಎಂದು ನಾಯನಾರ್ ಹೇಳಿದರು.

ಕೇರಳದಲ್ಲಿ ತೀವ್ರವಾಗಿರುವ ಈ ದುರ್ಭಿಕ್ಷದ ಪರಿಹಾರಕ್ಕೆ ಕರುಣಾಕರನ್ ರವರಿಂದ ಸಹಾಯ ಏನಾದರೂ ದೊರಕುತ್ತಿದೆಯೇ ಎಂಬ ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಕರುಣಾಕರನ್‌ರವರಿಗೆ ಈ ಬಗ್ಗೆ ತಲೆಕೆಡಿಸಿಕೊಳ್ಳಲು ಸಮಯವೇ ದೊರೆತಿಲ್ಲ. ಹಿಂದಿನವಾರ ನಾಲ್ಕು ಬಾರಿ ದೆಹಲಿಗೆ ಹಾರಿಬಂದರು. ಈ ನಾಲ್ಕು ಬಾರಿಯೂ ಕೇರಳದಿಂದ ದೆಹಲಿಗೆ, ದೆಹಲಿಯಿಂದ ಕೇರಳಕ್ಕೆ ಹಾರಾಡಿದರು. ಆದರೆ ಈ ನಾಲ್ಕು ಬಾರಿಯೂ ಅವರು ಮಾಡಲು ಸಾಧ್ಯವಾದದ್ದು ಇಷ್ಟೆ. ರಾಜೀವಗಾಂಧಿಯವರ ಕಛೇರಿಯ ಸಂದರ್ಶಕರ ಕೋಣೆಯಲ್ಲಿ ಕುಳಿತು ಕರುಣಾಕರನ್ ಹಾಗೂ ಕೇರಳ ಕಾಂಗ್ರೆಸ್‌ನ ಅಧ್ಯಕ್ಷ ಪದ್ಮನಾಭನ್ ಇವರು ಪರಸ್ಪರ ಮುಖ ನೋಡುವುದಷ್ಟೆ ಇವರ ಕೈಯಲ್ಲಿ ಸಾಧ್ಯವಾದದ್ದು. ರಾಜೀವಗಾಂಧಿಯವರನ್ನು ಭೇಟಿ ಮಾಡುವುದು ಇವರಿಗೆ ಆಗಲಿಲ್ಲ.

ಈಗ ಕೇರಳದಲ್ಲಿ ಕೇಂದ್ರ ಸರ್ಕಾರದ ಒಂದು ಪ್ರವಾಸಿ ತಂಡ ಅಧ್ಯಯಾನ ಮಾಡಿ ಹಿಂದುರುಗಿದೆ. ಈ ವರದಿಯ ಆಧಾರದ ಮೇಲೆ ಮುಂದಿನ ಕ್ರಮವನ್ನು ಕೇಂದ್ರ ಕೈಗೊಳ್ಳುತ್ತದೆ.

ಕೇರಳದಲ್ಲೊಂದು ಅಪರೂಪದ ಸುಗ್ರಿವಾಜ್ಞೆ

ಕೇರಳ ಸರ್ಕಾರಿ, ಅರೇ ಸರ್ಕಾರಿ ಹಾಗೂ ಸಾರ್ವಜನಿಕ ಉದ್ಯಮಗಳಲ್ಲಿ ಕಂಪ್ಯೂಟರ್‌ಗಳನ್ನು ತೊಡಗಿಸುವ ಎಲ್ಲಾ ಕ್ರಮಗಳನ್ನು ಕೂಡಲೇ ನಿಲ್ಲಿಸಬೇಕೆಂದು ಒಂದು ಸುಗ್ರಿವಾಜ್ಞೆಯನ್ನು ಹೊರಬಿಟ್ಟಿದೆ. ಈ ಸುಗ್ರಿವಾಜ್ಞೆಯನ್ನು ಹೊರತರುವಾಗಲೇ ಸಿ. ಪಿ. ಐ. (ಎಂ) ಆಗಲಿ ಎಡಪ್ರಜಾಪ್ರಭುತ್ವ ರಂಗವಾಗಲಿ ಕಂಪ್ಯೂಟರ್‌ಗೆವಿರೋಧವಲ್ಲ ಆದರೆ ನಿರುದ್ಯೋಗವನ್ನುಂಟು ಮಾಡುವ ಯಾವುದೇ ತಂತ್ರಜ್ಞಾನಕ್ಕೆ ನಮ್ಮ ವಿರೋಧವಿದೆ ಎಂದು ನಮ್ಮ ಸರ್ಕಾರ ಸ್ಪಷ್ಟಪಡಿಸಿದೆ.

ಕೇರಳ ಸರ್ಕಾರದಿಂದ ನರ್ಸುಗಳಿಗೆ ಎಂಟು ತಾಸು ಕೆಲಸ

ಆಸ್ಪತ್ರೆಗಳಲ್ಲಿ ಮಹಿಳಾ ಉದ್ಯೋಗಿಗಳಾದ ನರ್ಸ್‌ಗಳಿಗೆ ಹನ್ನೆರಡು ಗಂಟೆಯ ದುಡಿಮೆ ಇರುವುದು ಸರ್ವಸಾಮಾನ್ಯವಾದ ವಿಷಯ. ಆದರೆ ಸಿ. ಪಿ. ಐ. [ಎಂ] ನೇತೃತ್ವದ ಕೇರಳ ಸರ್ಕಾರ ಎಂಟುಗಂಟೆಗಳ ದುಡಿಮೆ ಮಾತ್ರ ಎಂದು ಚುನಾವಣೆ ಸಮಯದ ಆಶ್ವಾಸನೆ ಮೇರೆಗೆ ಮೇ ಒಂದರಿಂದ ಎಲ್ಲಾ ನರ್ಸ್‌ಗಳಿಗೂ ಎಂಟು ಗಂಟೆ ಮಾತ್ರ ಕೆಲಸ ಸಾಧ್ಯವಾಗುವಂತೆ ಶೀಘ್ರದಲ್ಲಿ ಜಾರಿಗೆ ತಂದಿದೆ.

8 ಗಂಟೆಗಳ ದುಡಿಮೆ ಎಂಬ ಘೋಷಣೆಯ ಮೇಲೆ ವಿಶ್ವಾದ್ಯಂತ ಆಚರಿಸಲಾಗುತ್ತಿರುವ ಈ ಮೇ ದಿನದಂದು ಕಾರ್ಮಿಕ ವರ್ಗಕ್ಕೆ ಕೇರಳ ಸರ್ಕಾರದ ಈ ಕೊಡುಗೆ ನೀಡಿದೆ.

(ದೇಶಾಭಿಮಾನಿಯಿಂದ)

ಒರಿಸ್ಸಾದಲ್ಲಿ ಬರಗಾಲದ ಸಾವುಗಳು

ಒರಿಸ್ಸಾದ ಹಿಂದುಳಿದ ಜಿಲ್ಲೆಯಾದ ಕೊರಾಪುರದಲ್ಲಿ 300 ಜನರಿಗಿಂತಲೂ ಹೆಚ್ಚಾಗಿ ಹಸಿವಿನ ಸಾವಿಗೆ ಗುರಿಯಾಗುತ್ತಿದ್ದಾರೆಂದು ಇಬ್ಬರುಜನತಾಪಕ್ಷದ ಶಾಸಕರು ಮಂಗಳವಾರ ಭುವನೇಶ್ವರದಲ್ಲಿ ತಿಳಿಸಿದರು.

ಶಾಸಕರಾದ ಶ್ರೀ ಬಿಜಯಮಹಾಪಾತ್ರ, ಶ್ರೀದಾಗ್ ಗೋವರ್ಧನ್‌ರವರು ಕಳೆದವಾರ ಆರುದಿನಗಳ ಕಾಲ ಜಿಲ್ಲೆಯಾದ್ಯಂತ ಅಧ್ಯಯನ ಮಾಡಿದರು. ರಾಜ್ಯ ಶಾಸಕ ಸದಸ್ಯರಸಮಾವೇಶದಲ್ಲಿ ಮಾತನಾಡುತ್ತಾ ಅನೇಕಪ್ರಾಂತಗಳಲ್ಲಿ ಕಂಡು ಬರುತ್ತಿರುವ ಈ ತೀವ್ರ ಪರಿಸ್ಥಿತಿಯನ್ನು ಎದುರಿಸಲು ಸರಕಾರ ಯಾವುದೇ ಕ್ರಮ ಕೈ ಗೊಳದಿದ್ದರೆ ಒಂದು ತಿಂಗಳೊಳಗಾಗಿ ಸಾವಿನ ಸಂಖ್ಯೆ ಸಾವಿರಕ್ಕಿಂತಲೂ ಹೆಚ್ಚಿಗೆ ಮೀರುತ್ತದೆ ಎಂದು ಹೇಳಿದರು. ಜಿಲ್ಲೆಯಲ್ಲಿಸಾಯುತ್ತಿರುವ ನೂರಾರು ಮಂದಿಗೆ ಸರ್ಕಾರ ಯಾವುದೇ ರೀತಿಯ ಸಹಾಯಮಾಡದೆ ಇರುವುದು ಬಹಳ ದುರದೃಷ್ಟಕರವಾಗಿದೆಯೆಂದು ಅವರು ತಿಳಿಸಿದರು.

ಹಿಂದುಳಿದ ಜಿಲ್ಲೆಯಲ್ಲಿ ಅಧ್ಯಯನ ಮಾಡಲು ಮೂವರನೊಳಗೊಂಡ ಜನತಾಪಕ್ಷದತಂಡ ಏರ್ಪಟ್ಟಿದೆ. ಇಲ್ಲಿಯಾರಿಗೂ ಒಂದು ಆಹಾರ ಕೇಂದ್ರವನ್ನೂ ಸಹ ತೆರೆಯಲಿಲ್ಲ. ಉಸ್ಮೊಂತಪುರದಲ್ಲಿ ಸುಮಾರು 134ಜನರುಹಸಿವಿನಸಾವಿಗೆ ಗುರಿಯಾಗಿದ್ದಾರೆ. ಈಘಟನೆಗಳು ಈ ವರ್ಷದ ಜನವರಿಯಿಂದ ಏಪ್ರಿಲ್ 15 ರೊಳಗಾಗಿ ನಡೆದಿದೆ ಎಂದು ಶ್ರೀಮಹಾಪಾತ್ರ, ಶ್ರೀ ಗೋವರ್ಧನ್ ತಿಳಿಯಪಡಿಸಿದರು.

[ಪ್ರಜಾಶಕ್ತಿಯಿಂದ]

RGE No. BGW-148 MAG (2) PRB DECR 319/78-79

ರಾಜ್ಯಾದ್ಯಂತ ಸಂಭ್ರಮದ ಮೇ ದಿನಾಚರಣೆ

ಬೆಂಗಳೂರು

ಸಿ. ಐ. ಟಿ. ಯು., ಎ. ಐ. ಟಿ. ಯು. ಸಿ., ಎಲ್. ಐ. ಸಿ., ಬ್ಯಾಂಕ್, ಜಿ. ಐ. ಸಿ. ಹಾಗೂ ಕೇಂದ್ರ ರಾಜ್ಯ ಸರ್ಕಾರೀ ನೌಕರರ ಸಂಘಗಳು ಬೆಂಗಳೂರಿನಲ್ಲಿ ಸಂಯುಕ್ತವಾಗಿ ಮೇ ದಿನವನ್ನು ಆಚರಿಸಿದವು. ನಗರದ ವಿವಿಧ ಕೈಗಾರಿಕಾ ಕೇಂದ್ರಗಳಿಂದ ಸಾವಿರಾರು ಕಾರ್ಮಿಕರು ಮೆರವಣಿಗೆಯ ಮೂಲಕ ಸಿಲ್ವರ್ ಜೂಬಿಲಿ ಪಾರ್ಕ್‌ನಲ್ಲಿ ಸಮಾವೇಶಗೊಂಡರು. ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಮೈಕೋ ಕಾರ್ಮಿಕ ಸಂಘದ ಪ್ರ. ಕಾರ್ಯದರ್ಶಿ ಕಾ. ವೀರಾಸ್ವಾಮಿ ವಹಿಸಿದ್ದರು. ಸಭೆಯ ಪ್ರಾರಂಭದಲ್ಲಿ ಎಸ್. ಎಫ್. ಐ. ಕಾರ್ಯಕರ್ತರು ಕ್ರಾಂತಿ ಗೀತೆಗಳನ್ನು ಹಾಡಿದರು. ಸಿ.ಐ.ಟಿ.ಯು. ನ ಕಾ|| ಸೂರ್ಯನಾರಾಯಣರಾವ್ ಕಾ|| ಎಸ್. ಸುಬ್ರಹ್ಮಣ್ಯ, ಎ.ಐ.ಟಿ.ಯು.ಸಿ. ಯ ಕಾ|| ಮಹದೇವನ್ ಮುಂತಾದವರು ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು.

ಅಮೇರಿಕನ್ ಸಾಮ್ರಾಜ್ಯಶಾಹಿಯ ಅಣು ಹಾಗೂ ತಾರಾ ಸಮರ ಯೋಜನೆ ಖಂಡಿಸುವ, ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ಶಾಸನಗಳನ್ನು ಹಿಂದೆಗೆದುಕೊಳ್ಳಲು ಒತ್ತಾಯಿಸುವ, ದೇಶದ ಐಕ್ಯತೆ – ಸಮಗ್ರತೆಗಾಗಿ ಹೋರಾಡುವ, ಛಿದ್ರಕಾರಿ ಪ್ರತ್ಯೇಕತಾವಾದಿ ಶಕ್ತಿಗಳನ್ನು ಎದುರಿಸುವ, ರೈತ ಕಾರ್ಮಿಕರ ಸಖ್ಯತೆಯನ್ನು ಬೆಳೆಸಿ, ರೈತರು ಬೆಳೆದ ಬೆಳೆಗೆ ನ್ಯಾಯ ಬೆಲೆಗಾಗಿ ಹೋರಾಡುವ ಮತ್ತು ದುಡಿಯುವ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಸಂವಿಧಾನದಲ್ಲಿ ಸೇರಿಸಲು ಒತ್ತಾಯಿಸುವ ನಿರ್ಣಯಗಳನ್ನು ಸಭೆಯು ಕೈಗೊಂಡಿತು. ಕಾ| ಬಾಲಕೃಷ್ಣ ವಂದನಾರ್ಪಣೆ ಮಾಡಿದರು. ಸಭೆಯ ನಂತರ ಸಮುದಾಯ ನಾಟಕ ತಂಡವು 'ಮೇ ದಿನಾಚರಣೆಯ ನೂರೊಂದು ವರ್ಷಗಳ ಚರಿತ್ರೆ'ಎಂಬ ನಾಟಕವನ್ನು ಅಭಿನಯಿಸಿತು.

ಬಂಟ್ವಾಳ

ಸಿ. ಐ. ಟಿ. ಯು. ಮತ್ತು ಎ. ಐ. ಟಿ. ಯು. ಸಿ.ಯಿಂದ ಸಂಯುಕ್ತವಾಗಿ ಮೇ ದಿನವನ್ನು ಬಂಟ್ವಾಳದಲ್ಲಿ ಆಚರಿಸಲಾಯಿತು. ಕಾರ್ಮಿಕರ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆಯಿತು. ಸಿ.ಐ.ಟಿ.ಯು.ನ ಕಾ|| ಬಿ. ವಾಸುಗಟ್ಟಿ ಸಭಿಕರನ್ನು ಸ್ವಾಗತಿಸಿದರು. ಎ.ಐ.ಟಿ.ಯು.ಸಿ. ಯ ಕಾ|| ಬಿ. ವಿಶ್ವನಾಥ ನಾಯರ್ ಅಧ್ಯಕ್ಷತೆ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಸಿ.ಪಿ.ಐ. [ಎಂ] ನ ದ. ಕನ್ನಡ ಜಿಲ್ಲಾ ಕಾರ್ಯದರ್ಶಿ ಕಾ|| ಕೆ. ಆರ್. ಶ್ರೀಯಾನ್., ಸಿ.ಪಿ.ಐ.ನ ಜಿಲ್ಲಾ ಕಾರ್ಯದರ್ಶಿ ಕಾ|| ಬಿ. ಕೆ. ಕೃಷ್ಣಪ್ಪ ಮಾತನಾಡಿದರು. ಕೊನೆಯಲ್ಲಿ ಕಾ|| ಹೆನ್ರಿ ಲೋಬೋ ವಂದನಾರ್ಪಣೆ ಮಾಡಿದರು.

ಭದ್ರಾವತಿ

ಮೇ ದಿನಾಚರಣೆಯ ಅಂಗವಾಗಿ ಸಿ.ಐ.ಟಿ.ಯು.ಗೆ ಸೇರಿದ ಹಮಾಲಿ ಕಾರ್ಮಿಕರು ಮತ್ತು ಎ.ಐ.ಟಿ.ಯು.ಸಿ. ಗೆ ಸೇರಿದ ಹೋಟೆಲ್ ಕಾರ್ಮಿಕರು ಭದ್ರಾವತಿಯ ಮುಖ್ಯರಸ್ತೆಗಳಲ್ಲಿ ಮೆರವಣಿಗೆ ನಡೆಸಿದರು. ಚರ್ಚ್ ಮೈದಾನದಲ್ಲಿ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಸಿ. ಪಿ. ಐ. (ಎಂ) ನ ಜಿಲ್ಲಾ ಕಾರ್ಯದರ್ಶಿ ಕಾ| ಎಸ್. ಬಿ. ಶಿವಶಂಕರ್ ವಹಿಸಿದ್ದರು. ಹಮಾಲಿ ಕಾರ್ಮಿಕ ಸಂಘದ ಕಾರ್ಯದರ್ಶಿ ಕಾ| ಬಸವರಾಜು ಸಭೆಗೆ ಸ್ವಾಗತ ಕೋರಿದರು.ಸಿ.ಐ.ಟಿ.ಯು.ನ ಕಾ|| ಎಲ್. ರಂಗೇಗೌಡ, ಎ.ಐ.ಟಿ. ಯು.ಸಿ. ಯ ಕಾ|| ಮಾಯಣ್ಣ ಮತ್ತಿತರ ಮುಖಂಡರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಕಾ|| ದಯಾನಂದ ವಂದನಾರ್ಪಣೆ ಮಾಡಿದರು.

ಭದ್ರಾವತಿಯ ಜನರಲ್ ಎಂಪ್ಲಾಯೀಸ್ ಮತ್ತು ಹಮಾಲಿ ಕಾರ್ಮಿಕ ಸಂಘದ ವತಿಯಿಂದ ಕೆಂಪು ಧ್ವಜಾರೋಹಣ ಕಾರ್ಯಕ್ರಮ ನಡೆಯಿತು.

ಧರ್ಮಸ್ಥಳ

ಪ್ರಪ್ರಥಮ ಬಾರಿಗೆ ಧರ್ಮಸ್ಥಳದಲ್ಲಿ ರೈತ ಕಾರ್ಮಿಕರು ಮೇ ದಿನವನ್ನು ಆಚರಿಸಿದರು. ಧರ್ಮಸ್ಥಳ ಗ್ರಾಮ ರೈತ ಸಂಘದ ಅಧ್ಯಕ್ಷರಾದ ಕಾ| ದೇವಾನಂದ ರವರು ಕೆಂಬಾವುಟವನ್ನು ಬಾನಿಗೇರಿಸಿದರು. ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ರೈತ ಮುಖಂಡರಾದ ಕಾ| ಬಿ. ವಿಷ್ಣುಮೂರ್ತಿ ಮಾತನಾಡಿ 101 ವರ್ಷಗಳ ಮೇ ದಿನದ ಚರಿತ್ರೆಯನ್ನು ವಿವರಿಸಿದರು. ದೇಶದ ಕಾರ್ಮಿಕ ವರ್ಗಕ್ಕೆ ಸಿ. ಐ. ಟಿ. ಯು. ಅಧ್ಯಕ್ಷರಾದ ಕಾ|| ಬಿ. ಟಿ. ರಣದಿವೆ ಅವರು ನೀಡಿದ ಸಂದೇಶವನ್ನು ವಿವರಿಸಿದರು. ಆರಂಭದಲ್ಲಿ ಗ್ರಾಮ ರೈತ ಸಂಘದ ಕಾರ್ಯದರ್ಶಿ ಕಾ| ಬಾಬುಗೌಡ ಸ್ವಾಗತಿಸಿದರು, ಕೊನೆಯಲ್ಲಿ ಕಾ| ಮಾಧವನ್ ಪಿಳ್ಳೆ ಧನ್ಯವಾದಗಳನ್ನು ಅರ್ಪಿಸಿದರು.

ಕಳಂಜ ಗ್ರಾಮದ ಕಾಯರ್ತಡ್ಕದಲ್ಲಿ ತಾಲೂಕು ರೈತ ಸಂಘದ ಅಧ್ಯಕ್ಷ ಕಾ|| ಪಿ. ಪಿ ಮಧಾಯಿಯವರು ಧ್ವಜಾರೋಹಣ ನಡೆಸಿ ಉದ್ಘಾಟಿಸಿದ ಮೇ ದಿನಾಚರಣೆಯ ಸಭೆಯಲ್ಲಿ ಕಾ|| ಪಿ. ಲಕ್ಷ್ಮಣಗೌಡ ಮಾತನಾಡಿದರು.

ಸಿಂಧನೂರು

ಮೇ ದಿನ ಅಂಗವಾಗಿ ಸಿಂಧನೂರಿನಲ್ಲಿ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆಯಿತು. ಬೆಳಗ್ಗೆ 9 ಗಂಟೆಗೆ ತುಂಗಭದ್ರಾ ಗ್ರಾಮೀಣ ಬ್ಯಾಂಕ್ ನೌಕರರ ಸಂಘದ ಸಹ ಕಾರ್ಯದರ್ಶಿ ಕಾ| ಶ್ರೀನಿವಾಸ್ ನವಲೆ ಧ್ವಜಾರೋಹಣ ನೆರವೇರಿಸಿದರು. ಸಮುದಾಯ ತಂಡದವರಿಂದ ಕ್ರಾಂತಿ ಗೀತೆಗಳ ಕಾರ್ಯಕ್ರಮ ನಡೆಯಿತು. ನಂತರ ನಡೆದ ಸಭೆಯಲ್ಲಿ ಕಾ| ಬಸವರಾಜಪ್ಪ ಕಾ|| ಬಾಷುಮಿಯ ಕಾ|| ಸಿ. ಎಸ್. ಹಿರೇಮಠ್ ಮಾತನಾಡಿದರು. ನಂತರ ಬೆಳಗ್ಗೆ 10 ಗಂಟೆಗೆ ಸಿ. ಐ. ಟಿ. ಯು. ಕಚೇರಿಯದರು ಮಹಿಳಾ ಸಂಘಟನೆಯ ಸದಸ್ಯೆ ಕಾ. ವೀಣಾರವರಿಂದ ಧ್ವಜಾರೋಹಣ ನಡೆಯಿತು. ಮೇ ದಿನದ ಮಹತ್ವವನ್ನು ಸಮುದಾಯ ಸಂಘಟನಾ ಕಾರ್ಯದರ್ಶಿ ಕಾ| ಎಂ. ಗೋಪಾಲಕೃಷ್ಣ ವಿವರಿಸಿದರು. 10-30 ಗಂಟೆಗೆ ಎ. ಕೆ. ಗೋಪಾಲನ್ ಕಾಲೋನಿಯಲ್ಲಿ ಮೇ ದಿನದ ಸಭೆ ನಡೆಯಿತು. ಕಾ|| ಬಸವರಾಜಪ್ಪ ಧ್ವಜಾರೋಹಣ ಮಾಡಿ ಮಾತನಾಡಿದರು. ಸಮುದಾಯ ತಂಡದವರು ಕ್ರಾಂತಿ ಗೀತೆಗಳನ್ನು ಹಾಡಿದರು.

ಸಂಜೆ 4 ಗಂಟೆಗೆ ಸಿ. ಐ. ಟಿ.ಯು. ಕಾರ್ಯಾಲಯದಿಂದ ಕಾರ್ಮಿಕರ ಮೆರವಣಿಗೆ ಪ್ರಾರಂಭವಾಯಿತು. 30 ಆಟೋರಿಕ್ಷಾಗಳು 50 ಎತ್ತಿನ ಬಂಡಿಗಳು ಈ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ನೂರಾರು ಮಂದಿ ಕೃಷಿ ಕಾರ್ಮಿಕರು, ವಿದ್ಯಾರ್ಥಿ ಯುವಜನರು ಹಾಗೂ ಮಹಿಳೆಯರು ಭಾಗವಹಿಸಿದರು. ನಂತರ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾ| ಬಸವರಾಜಪ್ಪ ವಹಿಸಿದ್ದರು. ಮಾಜೀ ಶಾಸಕರಾದ ಶ್ರೀ ಅಮರೇಗೌಡ ಗದ್ರಟಗಿ, ಪೋಲೀಸ್ ಅಧಿಕಾರಿಗಳಾದ ಶ್ರೀ ರವಿ ನಾರಾಯಣ, ಸಿ. ಐ. ಟಿ. ಯು. ಕಾರ್ಯದರ್ಶಿ ಕಾ|| ಬಾಷುಮಿಯಾ, ಡಿ. ವೈ. ಎಫ್. ಐ. ಜಿಲ್ಲಾ ಸಮಿತಿ ಅಧ್ಯಕ್ಷ ಕಾ|| ಗಂಗಾಧರ ಕುಷ್ಟಗಿ ಮುಂತಾದವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಶಿರಸಿ

ಮೇ ದಿನಾಚರಣೆಯ ಅಂಗವಾಗಿ ಶಿರಸಿಯಲ್ಲಿ ಸಿ. ಪಿ. ಐ. (ಎಂ) ನೇತೃತ್ವದಲ್ಲಿ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆಯಿತು, ಸಿ. ಪಿ. ಐ. (ಎಂ) ಸ್ಥಳೀಯ ಕಾರ್ಯದರ್ಶಿ ಕಾ| ಪಿ. ಜಿ. ಮಶಾಲ್ಡಿ ಕಾ|| ಆನಂದ ಹೆಗಡೆ ಮೆರವಣಿಗೆಯ ನೇತೃತ್ವ ವಹಿಸಿದರು. ಮೆರವಣಿಗೆಯಲ್ಲಿ ಕೆ. ಡಿ. ಸಿ. ಸಿ. ಬ್ಯಾಂಕ್, ಕೆನರಾ ಬ್ಯಾಂಕ್,ವಿಜಯಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಎಲ್. ಐ. ಸಿ ನೌಕರರು ಮತ್ತು ಮುಳುಗುಂದ ಔದ್ಯೋಗಿಕ ಕಾರ್ಮಿಕರು, ರೈತ ಕೂಲಿಕಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಬಹಿರಂಗ ಸಭೆಯನ್ನುದ್ದೇಶಿಸಿ ಕಾ| ಎಂ. ಎಸ್. ಧಾರೇಶ್ವರ್ ಮತ್ತು ಕಾ|| ಪಿ. ಜಿ. ಮಶಾಲ್ಡಿ ಮಾತನಾಡಿದರು.

ಉಡುಪಿ

ಉಡುಪಿಯಲ್ಲಿ ಮೇ ದಿನವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಸಿ.ಐ.ಟಿ.ಯು. ಮತ್ತು ಎ. ಐ. ಟಿ. ಯು. ಸಿ. ಯ ಜಂಟಿ ಆಶ್ರಯದಲ್ಲಿ ಉಡುಪಿಯ ವಿವಿಧ ಭಾಗಗಳಿಂದ ಹೊರಟ ಕಾರ್ಮಿಕರ, ರೈತರ ಮೆರವಣಿಗೆ ರಥ ಬೀದಿಯಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು. ಎ. ಐ. ಟಿ. ಯು. ಸಿ. ಮುಂದಾಳು ಕಾ| ಶಂಕರ ಸೆಟ್ಟಿಗಾರ್ ಅಧ್ಯಕ್ಷತೆ ವಹಿಸಿದ್ದರು.

ಕಾ|| ಎಚ್. ವಿಠಲ ಸ್ವಾಗತಿಸಿದರು. ಸಿ.ಐ.ಟಿ.ಯು. ಮುಂದಾಳು ಕಾ| ಡೇವಿಡ್ ಕರ್ಕಡ, ಕಾ|| ಶಂಕರ್ ಸೆಟ್ಟಿಗಾರ್ ಮೇ ದಿನದ ಮಹತ್ವವನ್ನು ವಿವರಿಸಿ ಮಾತನಾಡಿದರು.

ಅಖಿಲ ಭಾರತ ಕಿಸಾನ್ ಸಭಾ

"ಕಟಕ್ ಕೌನ್ಸಿಲ್ ಸಭೆ'ಯ ಪ್ರಮುಖ ನಿರ್ಣಯಗಳು

ಪಿ ಕೆ ಸಿ ಯ ಸಭೆಯು ಏಪ್ರಿಲ್ 24 ರಂದು ಎ.ಐ.ಕೆ.ಸಿ. ಸಭೆಯು ಏಪ್ರಿಲ್ 25 ಮತ್ತು 26 ರಂದು ಒರಿಸ್ಸಾ ರಾಜ್ಯದ ಕಟಕ್‌ನಲ್ಲಿ ವಿಜೃಂಭಣೆಯಿಂದ ಉತ್ಕಲ ರಾಜ್ಯ ಕಿಸಾನ್ ಸಭೆಯ ಆತಿಥ್ಯದಲ್ಲಿ ನಡೆಯಿತು.

ಅಖಿಲ ಭಾರತ ಕಿಸಾನ್ ಸಮಿತಿ ದೇಶಾದ್ಯಂತ ರೈತರ ಒಗ್ಗಟ್ಟಾದ ಹೋರಾಟವನ್ನು ರೂಪಿಸುವುದಕ್ಕಾಗಿ ಈ ಕೆಳಗಿನ ನಿರ್ಣಯಗಳನ್ನು ಕೈಗೊಂಡಿದೆ.

1. ಸೆಪ್ಟೆಂಬರ್ 7 ರಿಂದ 13 ರವರೆಗೆ ರೈತರ ಪ್ರಮುಖ ಬೇಡಿಕೆಗಳನ್ನು ಪಡೆಯುವುದಕ್ಕಾಗಿ ಅಖಿಲ ಭಾರತ ಎ.ಐ. ಕೆ.ಸಿ.ಯು. ಚಳುವಳಿಯನ್ನು ನಡಸುವುದು.

2. ಸದಸ್ಯತ್ವ ನೊಂದಾಯಿಸುವ ತಾರೀಕನ್ನು ಮೇ 31, 1987 ರವರೆಗೆ ಮುಂದುವರೆಸುವುದು.

3. ದೇಶದ 13 ರಾಜ್ಯಗಳಲ್ಲಿ ತಲೆದೋರಿದ ಭೀಕರ ಬರಗಾಲದ ಹಿನ್ನೆಲೆಯಲ್ಲಿ ಎಲ್ಲಾ ಕಿಸಾನ್‌ಸಭಾ ಘಟಕಗಳು ಚುರುಕಾಗಿ ಪ್ರಕ್ಷೋಭೆ ನಡೆಸಬೇಕೆಂದೂ, ಸಾಧ್ಯವಿದ್ದಲ್ಲೆಲ್ಲಾ ಬರಗಾಲ ಪೀಡಿತ ರೈತರಿಗೆ ಗಂಜಿ ಕೇಂದ್ರಗಳನ್ನು ಒದಗಿಸಲು ಪ್ರಯತ್ನಿಸಬೇಕೆಂದೂ ಒರಿಸ್ಸಾ ಮತ್ತು ಆಂಧ್ರದ ಎರಡು ಜಿಲ್ಲೆಗಳಲ್ಲಿ ಬರಗಾಲದಿಂದ ಸಾವನ್ನಪ್ಪಿದ ರೈತ ಬಂಧುಗಳ ಸಹಾಯಕ್ಕಾಗಿ ಹಣ ಸಂಗ್ರಹಿಸಬೇಕೆಂದೂ ತೀರ್ಮಾನಿಸಲಾಯಿತು.

4. ಅಖಿಲ ಭಾರತ ಕಿಸಾನ್ ಸಭೆಯ ಪ್ರಮುಖ ಅಧಿಕಾರಿ ವರ್ಗದ ಸಂಗಾತಿಗಳು ಎಲ್ಲಾ ರಾಜ್ಯ ಸಮಿತಿಗಳ ಸಭೆಗಳಿಗೆ ಹಾಜರಾಗಿ ಸಂಘಟನೆ ಮತ್ತು ರಾಷ್ಟ್ರವ್ಯಾಪಿ ಹೋರಾಟದ ಕುರಿತು ಚರ್ಚಿಸಿ ಯಶಸ್ವಿಯಾಗಿ ಕೆಲಸ ಮಾಡಬೇಕೆಂದು ನಿರ್ದೇಶಿಸಲಾಯಿತು.

ಅಖಿಲ ಭಾರತ ಕಿಸಾನ್‌ಸಭೆಯ ಕೇಂದ್ರ ಕಛೇರಿಯು ಇನ್ನಷ್ಟು ಉತ್ತಮ ರೀತಿಯಲ್ಲಿ ಕಾರ್ಯವೆಸಗಲು ಅನುಕೂಲವಾಗುವಂತೆ ಕೇಂದ್ರವನ್ನು ಬಲಪಡಿಸುವ ದೃಷ್ಟಿಯಲ್ಲಿ ಸಭೆಯು ಕಾ|| ರಾಮನಾರಾಯಣ ಗೋಸ್ವಾಮಿಯವರನ್ನು ಮತ್ತೊಬ್ಬ ಜಂಟಿ ಕಾರ್ಯದರ್ಶಿಯಾಗಿ ಆರಿಸಿತು.

ಕಾ| ಚಂದ್ರಶೇಖರ್ ಬಾಳೆ ಮತ್ತು ಎಂ. ಎನ್. ಉಗ್ರಪ್ಪ ಕಾ| ರಾಮಚಂದ್ರರಾವ್ ಕರ್ನಾಟಕ ಪ್ರಾಂತ ರೈತ ಸಂಘದ ಪರವಾಗಿ ಸಭೆಯಲ್ಲಿ ಭಾಗವಹಿಸಿದರು. ಕರ್ನಾಟಕದ ಚಟುವಟಿಕೆಗಳ ಕುರಿತು ವರದಿ ಸಮರ್ಪಿಸಿದರು.

ಸಭೆಯ ಕೊನೆಯಲ್ಲಿ ಕಾ||ಸುರಜಿತ್ ರವರು ಮಾತನಾಡುತ್ತಾ "ನಾವು ನಮ್ಮ ಚಟುವಟಿಕೆಗಳಿಗಾಗಿ ಸ್ವಲ್ಪ ಮಟ್ಟಿಗೆ ಹೆಮ್ಮೆ ಪಡುವುದಾದರೂ, ನಾವು ಮಾಡಬೇಕಾಗಿರುವ ಕೆಲಸ ಕಾರ್ಯಗಳ ದೃಷ್ಟಿಯಿಂದ ನೋಡಿದಾಗ ನಾವು ಬಹಳಷ್ಟು ಕಾರ್ಯಪ್ರವೃತ್ತರಾಗಬೇಕಾಗಿದೆ,ಎಂದು ಎಚ್ಚರಿಸಿದರು. ಕಾರ್ಮಿಕ ಕ್ರಾಂತಿ ಜನತಾ ಪ್ರಜಾಪ್ರಭುತ್ವದ ಕ್ರಾಂತಿಯ ಕೀಲಿಗೈ ದೇಶದಲ್ಲಿ ಆರ್ಥಿಕ ಪರಿಸ್ಥಿತಿ ತೀವ್ರವಾಗಿ ಹದಗೆಡುತ್ತಿರುವ ಹಿನ್ನಲೆಯಲ್ಲಿ, ರೈತರ ಮೇಲೆ ಹೆಚ್ಚೆಚ್ಚು ಆರ್ಥಿಕ ಭಾರಗಳು ಬೀಳುತ್ತಿರುವ ಹಿನ್ನಲೆಯಲ್ಲಿ, ನವು ಅಖಿಲ ಭಾರತ ಕಿಸಾನ್ ಸಭಾದ ಘಟಕಗಳು ಸಕ್ರೀಯವಾಗಿ ರೈತರ ಪ್ರಶ್ನೆಗಳನ್ನು ಎತ್ತಿ ಹೋರಾಟಗಳನ್ನು ಸಂಘಟಿಸಲು ಹಿಂಜರಿದರೆ, ಭೂಮಾಲಕ ಪ್ರತಿನಿಧಿಗಳು ಈ ಪ್ರಶ್ನೆಗಳನ್ನೆತ್ತಿ ರೈತರನ್ನು ಬೀದಿಗಿಳಿಸಿ ರೈತರನ್ನು ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ದಾರಿಯಿಂದ ವಿಚಲಗೊಳಿಸುತ್ತಾರೆ" ಎಂದು ಎಚ್ಚರಿಸಿದರು.

ಏಪ್ರಿಲ್ 25 ರಂದು ಸಂಜೆ ಕಟಕ್‌ನ ಸ್ಟೇಡಿಯಂನ ವಿಶಾಲ ಮೈದಾನದಲ್ಲಿ 10,000 ಕ್ಕೂ ಹೆಚ್ಚು ರೈತ-ಕೃಷಿಕೂಲಿಕಾರರ – ಕಾರ್ಮಿಕ– ನೌಕರರ ಅಧಿವೇಶನದಿಂದ ಕಾರ್ಯಕಲಾಪಗಳು ಆರಂಭವಾದವು. ಮೆರವಣಿಗೆಯು ವರ್ಣರಂಜಿತವಾಗಿತ್ತು. ಒರಿಸ್ಸಾದ ಆದಿವಾಸಿಗಳು ತಮ್ಮ ಬಣ್ಣ ಬಣ್ಣದ ಉಡುಗೆ ಧರಿಸಿ ಮೆರವಣಿಗೆಯನ್ನು ಬಹಿರಂಗ ಸಭೆಯನ್ನು ಯಶಸ್ವಿಗೊಳಿಸಿದರು.

✕✕✕✕✕✕✕✕✕✕✕✕

ವಿಶೇಷ ಪುರವಣಿ

ಎಡ ಕ್ರಿಶ್ಚಿಯನ್ ವಿಚ್ಛಿದ್ರಕಾರಿಗಳ ಹಾಗೂ ಮುಂಬಯಿಯಲ್ಲಿ ನಡೆಯುತ್ತಿರುವ ಸಿ.ಐ.ಟಿ.ಯು 6 ನೇ ಸಮಾವೇಶ ಮತ್ತು ಲೇಖನಗಳನ್ನೊಳಗೊಂಡ 16 ಪುಟಗಳ ವಿಶೇಷಾಂಕವನ್ನು 31-5-87 ಕ್ಕೆ ಹೊರಡಿಸುತ್ತೇವೆ ಪ್ರತಿ ಹೆಚ್ಚಿಗೆಬೇಕಾದವರು ಕೂಡಲೇ ತಿಳಿಸಿರಿ.

ಸಂಪಾದಕ ಮಂಡಳಿ

✕✕✕✕✕✕✕✕✕✕✕✕

Printed & Published by P. Ramachandra Rao on behalf of the Communist Party of India [Marxist] Karnataka State Committee K. V. Temple Street, Sultanpet, Bangalore-560053 Editorial and Managerial Office : L-56, K. V. Temple Street, Sultanpet B-53 Phone : 75331 Editor P· RamachandraRao Managing Editor : N. K. Upadhyaya